# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಶಿಕ್ಷಣ ಸ್ಥಾಯಿ ಸಮಿತಿಯು ದಿನಾಂಕ:09.10.2013ರಂದು ನಡೆದ ಸಭೆಯ ನಡವಳಿಗಳು.

| ಕ್ರ. ಸ | ಅಧ್ಯಕ್ಷರು ಹಾಗೂ ಸದಸ್ಯರು ಶ್ರೀಯುತರುಗಳಾದ | ಪದನಾಮ | ಕ್ರ. ಸ | ಹಾಜರಿದ್ದ ಅಧಿಕಾರಿಗಳ ಹೆಸರು ಶ್ರೀಯುತರುಗಳಾದ | ಪದನಾಮ |
|---|---|---|---|---|---|
| 1 | ಎ.ಕೋದಂಡ ರೆಡ್ಡಿ | ಅಧ್ಯಕ್ಷರು | 1 | ಕೆ.ಹೇಮೋಜಿ ನಾಯಕ್ | ಅ.ಆ(ಶಿಕ್ಷಣ) |
| 2 | ಶಶಿಕಲಾ ಕೃಷ್ಣೇಗೌಡ | ಸದಸ್ಯರು | 2 | ಡಾ: ಬಿ.ಎಸ್.ಮಂಜುನಾಥ ಸ್ವಾಮಿ | ಶಿಕ್ಷಣಾಧಿಕಾರಿಗಳು |
| 3 | ಡಾ:ಎಸ್.ರಾಜು | ಸದಸ್ಯರು | 3 | ಬಿ.ಇ.ಗೋವಿಂದರಾಜು | ಕೌನ್ಸಿಲ್ ಕಾರ್ಯದರ್ಶಿ |
| 4 | ಎಂ.ಕೃಷ್ಣಪ್ಪ | ಸದಸ್ಯರು | 4 | ಬಿ.ಆರ್.ತಾರಾಮತಿ | ಅ.ಶಿ.ಅ(ಪೂರ್ವ) |
| 5 | ವೈ.ಎನ್.ಅಶ್ವಥ್ | ಸದಸ್ಯರು | 5 | ಶ್ರೀ.ವಿ.ವೆಂಕಟಕೃಷ್ಣಪ್ಪ | ದೈಹಿಕ ಶಿಕ್ಷಣಾಧಿಕಾರಿ |
| 6 | ಪಿ.ಸುಗುಮಾರ್(ಸುಗುಣ) | ಸದಸ್ಯರು | 6 | ಜಿ.ಎಸ್.ನಾಗರಾಜು | ಕ್ರೀಡಾಧಿಕಾರಿ |
| 7 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | 7 | ಶ್ರೀ.ಡಿ.ಪಿ.ಮಹೇಂದ್ರ ಸ್ವಾಮಿ | ಕ್ರೀಡಾಂಗಣದ ಮೇಲ್ವಿಚಾರಕರು |
| 8 | ನೂರ್ ಜಹಾನ್ | ಸದಸ್ಯರು | | | |

ಸಭೆಯು ಬೆಳ್ಳಿಗೆ 11.00 ಘಂಟೆಗೆ ಪ್ರಾರಂಭವಾಗಿದ್ದು, ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಕಾರ್ಯ ಕ್ರಮದಪಟ್ಟಿಯಲ್ಲಿರುವ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವಂತೆ ಎಲ್ಲಾ ಸದಸ್ಯರ ಸಹಕಾರವನ್ನು ಕೋರಲಾಯ್ತು.

01. **ವಿಷಯ ಸಂಖ್ಯೆ: ಶಿ.ಸ್ಥಾ.ಸ/1/13-14**

ಭಾರತೀಯ ವಿದ್ಯಾ ಭವನ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಯೋಗದೊಂದಿಗೆ ಶ್ರೀರಾಮಪುರದಲ್ಲಿ ಪಬ್ಲಿಕ್ ಶಾಲೆಯನ್ನು ಪ್ರಾರಂಭಿಸಲಾಗಿರುತ್ತದೆ. ಸದರಿ ಶಾಲೆಯನ್ನು ಪ್ರಾರಂಭಿಸುವ ಮೊದಲು ದಿನಾಂಕ: 12.11.2007ರಂದು 15 ವರ್ಷಗಳ ಅವಧಿಗೆ (12.11.2007 ರಿಂದ 25.11.2022) ಒಡಂಬಡಿಕೆ ಮಾಡಿಕೊಂಡು ಸದರಿ ಶಾಲೆಯನ್ನು ಮುಂದುವರೆಸಲಾಗುತ್ತಿದೆ. ಸದರಿ ಶಾಲೆಗೆ ಪೋಷಕರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದೆ. ದಿನಾಂಕ: 10.01.2013ರಂದು ಭಾರತೀಯ ವಿದ್ಯಾ ಭವನ ರವರು ಪತ್ರವನ್ನು ವಿಳಾಸ ಮಾಡಿ ಸಿ.ಬಿ.ಎಸ್.ಸಿ ನಿಯಮ ಹಾಗೂ ಕಾಯ್ದೆಯಂತೆ, ಗುತ್ತಿಗೆಯ ಅವಧಿಯನ್ನು 15 ವರ್ಷಗಳಿಂದ 30 ವರ್ಷಗಳಿಗೆ ವಿಸ್ತರಿಸಬೇಕೆಂದು ಕೋರಿರುತ್ತಾರೆ. ಸದರಿ ಪತ್ರದಲ್ಲಿ ನಗರಾಭಿವೃದ್ಧಿ ಸಚಿವರಾಗಿದ್ದ ಶ್ರೀ. ಸುರೇಶ್ ಕುಮಾರ್ ರವರು ಗುತ್ತಿಗೆಯ ಅವಧಿಯನ್ನು 15 ರಿಂದ 30 ವರ್ಷಕ್ಕೆ ವಿಸ್ತರಿಸಲು ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

ಸದರಿ ವಿಷಯದ ಬಗ್ಗೆ ಕಾನೂನು ಕೋಶದ ಮುಖ್ಯಸ್ಥರು, ಈ ಕೆಳಕಂಡಂತೆ ಅಭಿಪ್ರಾಯ ಪಟ್ಟಿರುತ್ತಾರೆ. ಕಡತದಲ್ಲಿ ಲಗತ್ತಿಸಿರುವ 5ನೇ ಪುಟದ ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್ ಸಂಯೋಜನೆಯ ಬೈಲಾ ಪ್ರತಿಯಲ್ಲಿ ಶಾಲಾ ನಡೆಸಲು ಈ ಕೆಳಕಂಡ ಷರತ್ತನ್ನು ವಿಧಿಸಿದ್ದು.

"In metropolitan cities with a population exceeding 25 lacs, the land should not be less than one acres with adequate building & arrangement with other Institution/Organization for imparting physical & health education and for conducting games, to the satisfaction of the Board. In case of lease, it will be accepted if it is for at least 30 years. Provided further that in case of any portion which is leased out below 30 years, such case may be considered provided that land has been allotted by the govt., or govt. Agencies and it is as per the law of the land. In all such cases school should have at least one acre of land by ownership or by lease for 30 years and in all case the total land area should not be less than about 2 acres"

ಅಧ್ಯಕ್ಷರು 18/10/13
ಶಿಕ್ಷಣ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕೆ.ಎಂ.ಸಿ ಕಾಯ್ದೆ ಕಲಂ 176ರ ಅನ್ವಯ ಸರ್ಕಾರದ ಅನುಮೋದನೆ ಇಲ್ಲದೆ ಯಾವುದೇ ಸ್ಥಿರಾಸ್ತಿಗಳನ್ನು 5 ವರ್ಷಗಳಿಗೆ ಮೇಲ್ಪಟ್ಟು ನೀಡತಕ್ಕದ್ದಾಗಿರುವುದಿಲ್ಲ.

ಆದ ಮೇರೆಗೆ, ಪ್ರಸ್ತಾಪಿತ ವಿಷಯದಲ್ಲಿ ಶಿಕ್ಷಣ ಸ್ಥಾಯಿ ಸಮಿತಿ ಹಾಗೂ ಮಹಾನಗರ ಪಾಲಿಕೆಯ ಸಭೆಯ ಮುಂದೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ಪತ್ರದ ಸಂಖ್ಯೆ:ವಿದ್ಯಾ(2)ಪಿಆರ್/176/12-13, ದಿನಾಂಕ:16.08.2013ರ ಟಿಪ್ಪಣಿ ಬಗ್ಗೆ.

<u>ದಿನಾಂಕ: 09.10.2013ರ ನಿರ್ಣಯ:</u>

ಗುತ್ತಿಗೆ ಅವಧಿಯನ್ನು ವಿಸ್ತರಿಸುವ ವಿಷಯವು ನಗರ ಯೋಜನೆ ಮತ್ತು ಅಭಿವೃದ್ಧಿ ಹಾಗೂ ಆರ್ಥಿಕ ಸ್ಥಾಯಿ ಸಮಿತಿಯ ವ್ಯಾಪ್ತಿಗೆ ಬರುವುದರಿಂದ, ಈ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೌನ್ಸಿಲ್ ಕಾರ್ಯಾಲಯಕ್ಕೆ ಹಿಂದಿರುಗಿಸಲು ಸಮಿತಿಯು ತೀರ್ಮಾನಿಸಿತು.

02. <u>ವಿಷಯ ಸಂಖ್ಯೆ: ಶಿ.ಸ್ಥಾ.ಸ/2/13-14</u>

2011-12ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಿಕ್ಷಣ ಇಲಾಖೆಯಡಿ 89 ಶಿಶುವಿಹಾರ, 13 ಪ್ರಾಥಮಿಕ ಶಾಲೆ ಹಾಗೂ 34 ಪ್ರೌಢ ಶಾಲೆಗಳು ಅಸ್ತಿತ್ವದಲ್ಲಿದ್ದು, ಸದರಿ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಸಕಲ ವರ್ಗದ ವಿದ್ಯಾರ್ಥಿಗಳಿಗೆ 2013-14ನೇ ಸಾಲಿನಲ್ಲಿ ಪಾಲಿಕೆಯ ವತಿಯಿಂದ ಉಚಿತವಾಗಿ ಶಾಲಾ ಸಮವಸ್ತ್ರವನ್ನು ಸರಬರಾಜು ಮಾಡಬೇಕಾಗಿರುತ್ತದೆ. ಮೆ: ದಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಒಂದು ಉದ್ಯಮ) ರವರ ಪತ್ರದ ಸಂಖ್ಯೆ KHDC/MD/Mktg(WS)BBMP-Uni/2011-12, ದಿನಾಂಕ: 12.03.2012ರಂದು ಮಾನ್ಯ ಆಯುಕ್ತ ರವರಿಗೆ ಪತ್ರವನ್ನು ವಿಳಾಸ ಮಾಡಿ ಕಳೆದ ಏಳೆಂಟು ವರ್ಷಗಳಿಂದ ಬಿ.ಬಿ.ಎಂ.ಪಿ ಶಾಲೆಗಳಿಗೆ ಸಮವಸ್ತ್ರಗಳನ್ನು ಸರಬರಾಜು ಮಾಡುತ್ತಿದ್ದು, ಅದರಂತೆ, ಪ್ರಸಕ್ತ 2013-14ನೇ ಸಾಲಿನಲ್ಲಿ ಮಹಾನಗರ ಪಾಲಿಕೆ ಶಾಲೆಗಳ ವಿದ್ಯಾರ್ಥಿಗಳಿಗೆ ಸಿದ್ಧಪಡಿಸಿದ ಸಮವಸ್ತ್ರಗಳನ್ನು ಸರಬರಾಜು ಮಾಡಲು ಸರಬರಾಜು ಆದೇಶ ನೀಡುವಂತೆ ಕೋರಿರುತ್ತಾರೆ.

2013-14ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 89 ಶಿಶುವಿಹಾರ, 13 ಪ್ರಾಥಮಿಕ ಶಾಲೆ ಮತ್ತು 34 ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಶೈಕ್ಷಣಿಕ ವರ್ಷದ ಆರಂಭದಲ್ಲೇ ಶಾಲಾ ಸಮವಸ್ತ್ರಗಳನ್ನು ಒದಗಿಸುವುದು ಅವಶ್ಯಕವಾಗಿರುತ್ತದೆ. 2013-14ನೇ ಸಾಲಿನ ಆಯವ್ಯಯದಲ್ಲಿ ಪಾಲಿಕೆಯ ಶಿಶುವಿಹಾರದಿಂದ ಪ್ರೌಢ ಶಾಲೆವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಶಾಲಾ ಸಮವಸ್ತ್ರಗಳನ್ನು ಸರಬರಾಜು ಮಾಡಲು ಲೆಕ್ಕ ಶೀರ್ಷಿಕೆ : "25 ಶಿಕ್ಷಣ, ಇತರೇ ವೆಚ್ಚಗಳು, ಶಿಶುವಿಹಾರದಿಂದ ಪ್ರೌಢ ಶಾಲಾವರೆಗಿನ ವಿದ್ಯಾರ್ಥಿಗಳಿಗೆ ಶಾಲಾ ಸಮವಸ್ತ್ರ ನೀಡುವುದು ಮತ್ತು ಸ್ವೆಟರ್‌ಗಳನ್ನು ನೀಡುವುದು" ಎಂಬ ಉಪ ಶೀರ್ಷಿಕೆಯಲ್ಲಿ ಅಂದಾಜು ರೂ.150.00 ಲಕ್ಷಗಳ ಆಯವ್ಯಯವನ್ನು ನಿರೀಕ್ಷಿಸಿ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ. 2013-14ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಿಶುವಿಹಾರದಿಂದ ಪ್ರೌಢ ಶಾಲೆವರೆಗೆ ವ್ಯಾಸಂಗ ಮಾಡುವ ಅಂದಾಜು ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯಾಬಲವನ್ನು, ಈ ಕೆಳಕಂಡಂತೆ ನಮೂದಿಸಲಾಗಿದೆ.

| ಕ್ರ.ಸ | ತರಗತಿ | ವಿದ್ಯಾರ್ಥಿಗಳು | ವಿದ್ಯಾರ್ಥಿನಿಯರು | ಒಟ್ಟು |
|---|---|---|---|---|
| 1 | ಶಿಶುವಿಹಾರ | 2450 | 2300 | 4750 |
| 2 | 1 & 2ನೇ ತರಗತಿ | 290 | 265 | 555 |
| 3 | 3 & 4ನೇ ತರಗತಿ | 285 | 255 | 540 |
| 4 | 5 ರಿಂದ 7ನೇ ತರಗತಿ | 525 | 410 | 935 |
| 5 | 8ನೇ ತರಗತಿ | 820 | 1380 | 2200 |
| 6 | 9ನೇ ತರಗತಿ | 1005 | 1730 | 2735 |
| 7 | 10ನೇ ತರಗತಿ | 885 | 1570 | 2455 |
| ಒಟ್ಟು | | 6250 | 7910 | 14170 |



ಅಧ್ಯಕ್ಷರು 15/10/13
ಶಿಕ್ಷಣ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಸದರಿ ಸಂಸ್ಥೆಯವರು ದಿನಾಂಕ: 31.01.2013ರಂದು ಈ ಕೆಳಕಂಡಂತೆ ದರಪಟ್ಟಿಯನ್ನು ಸಲ್ಲಿಸಿ ಆ ದರದಂತೆ ಸರಬರಾಜು ಮಾಡಲು ಕೋರಿರುತ್ತಾರೆ,

| ಕ್ರ.ಸ | ಶಾಲಾ ವರ್ಗ | ಸಿದ್ಧಪಡಿಸಿದ ಸಮವಸ್ತ್ರಗಳ ಬೆಲೆ (ಒಂದು ಜೊತೆಗೆ) | | | |
|---|---|---|---|---|---|
| | | ಬಾಲಕರು | | ಬಾಲಕಿಯರು | |
| | | ನಿಕ್ಕರ್ / ಅರ್ಧ ತೋಳಿನ ಷರ್ಟ್ ಮತ್ತು ಪ್ಯಾಂಟ್ / ಅರ್ಧ ತೋಳಿನ ಷರ್ಟ್ | | ಸ್ಕರ್ಟ್ ಮತ್ತು ಅರ್ಧ್ ತೋಳಿನ ಬ್ಲೌಸ್ | |
| | | ಬಣ್ಣದ ಸಮವಸ್ತ್ರ | ಬಿಳಿ ಸಮವಸ್ತ್ರ | ಬಣ್ಣದ ಸಮವಸ್ತ್ರ | ಬಿಳಿ ಸಮವಸ್ತ್ರ |
| 1 | ಶಿಶುವಿಹಾರ | 280.00 | -- | 371.00 | -- |
| 2 | 1 & 2ನೇ ತರಗತಿ | 329.00 | -- | 417.00 | -- |
| 3 | 3 & 4ನೇ ತರಗತಿ | 353.00 | -- | 479.00 | -- |
| 4 | 5 ರಿಂದ 7ನೇ ತರಗತಿ | 437.00 | -- | 526.00 | -- |
| 5 | 8ನೇ ತರಗತಿ | 595.00 | 564.00 | 574.00 | 538.00 |
| 6 | 9ನೇ ತರಗತಿ | 595.00 | 564.00 | 606.00 | 570.00 |
| 7 | 10ನೇ ತರಗತಿ | 595.00 | 564.00 | 606.00 | 570.00 |

ಮೇಲ್ಕಂಡ ದರಪಟ್ಟಿಯಂತೆ, ಶಿಶುವಿಹಾರದಿಂದ ಪ್ರೌಢ ಶಾಲೆವರೆಗೆ ವ್ಯಾಸಂಗ ಮಾಡುವ ಸುಮಾರು 14170 ಮಂದಿ ಸಕಲ ವರ್ಗದ ವಿದ್ಯಾರ್ಥಿಗಳಿಗೆ ಸಮವಸ್ತ್ರಗಳನ್ನು ಖರೀದಿಸಿ ವಿತರಿಸಲು ತಗಲುವ ವೆಚ್ಚ ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸ | ಶಾಲಾ ವರ್ಗ | ಸಮವಸ್ತ್ರದ ಮಾದರಿ | ಸಮವಸ್ತ್ರದ ದರ(ಒಂದು ಜೊತೆಗೆ) (ಹೊಲಿಗೆ ದರ, ಮಾರಾಟ ತೆರಿಗೆ, ಸಾಗಣಿಕೆ ವೆಚ್ಚ ಸೇರಿ) (ರೂ.ಪೈ. ಗಳಲ್ಲಿ) | | ಅಂದಾಜು ಸಂಖ್ಯಾಬಲ | ಬಣ್ಣದ ಸಮವಸ್ತ್ರದ ಮೊತ್ತ (ರೂ.ಪೈಗಳಲ್ಲಿ) | ಬಿಳಿ ಸಮವಸ್ತ್ರದ ಮೊತ್ತ (ರೂ.ಪೈಗಳಲ್ಲಿ) | ಒಟ್ಟು ಮೊತ್ತ (ರೂ.ಪೈಗಳಲ್ಲಿ) |
|---|---|---|---|---|---|---|---|---|
| ಬಾಲಕರಿಗೆ | | | ಬಣ್ಣದ ಸಮ ವಸ್ತ್ರ | ಬಿಳಿ ಸಮ ವಸ್ತ್ರ | | | | |
| 1 | ಶಿಶುವಿಹಾರ | ಅರ್ಧ ತೋಳಿನ ಷರ್ಟ್ ಮತ್ತು ನಿಕ್ಕರ್ | 280 | | 2,450 | 6,86,000.00 | | 6,86,000.00 |
| 2 | 1 & 2ನೇ ತರಗತಿ | | 329 | | 290 | 95,410.00 | | 95,410.00 |

ಅಧ್ಯಕ್ಷರು 18/10/13
ಶಿಕ್ಷಣ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

| | | | | | | | | |
|---|---|---|---|---|---|---|---|---|
| 3 | 3 & 4ನೇ ತರಗತಿ | | 353 | | 285 | 1,00,605.00 | | 1,00,605.00 |
| 4 | 5 ರಿಂದ 7ನೇ ತರಗತಿ | | 437 | | 525 | 2,29,425.00 | | 2,29,425.00 |
| 5 | 8ನೇ ತರಗತಿ | ಅರ್ಧ ತೋಳಿನ ಷರ್ಟ್ ಮತ್ತು ಪೂರ್ಣ ಪ್ಯಾಂಟ್ | 595 | 564 | 820 | 4,87,900.00 | 4,62,480.00 | 9,50,380.00 |
| 6 | 9ನೇ ತರಗತಿ | | 595 | 564 | 1,005 | 5,97,975.00 | 5,66,820.00 | 11,64,795.00 |
| 7 | 10ನೇ ತರಗತಿ | | 595 | 564 | 885 | 5,26,575.00 | 4,99,140.00 | 10,25,715.00 |
| **ಒಟ್ಟು** | | | | | **6,260** | **27,23,890.00** | **15,28,440.00** | **42,52,330.00** |
| **ಬಾಲಕಿಯರಿಗೆ** | | | | | | | | |
| 1 | ಶಿಶುವಿಹಾರ | ಅರ್ಧ ತೋಳಿನ ಷರ್ಟ್ ಮತ್ತು ಸ್ಕರ್ಟ್ | 371 | - | 2,300 | 8,53,300.00 | | 8,53,300.00 |
| 2 | 1 & 2ನೇ ತರಗತಿ | | 417 | - | 265 | 1,10,505.00 | | 1,10,505.00 |
| 3 | 3 & 4ನೇ ತರಗತಿ | | 479 | - | 255 | 1,22,145.00 | | 1,22,145.00 |
| 4 | 5 ರಿಂದ 7ನೇ ತರಗತಿ | | 526 | - | 410 | 2,15,660.00 | | 2,15,660.00 |
| 5 | 8ನೇ ತರಗತಿ | | 574 | 538 | 1380 | 7,92,120.00 | 7,42,440.00 | 15,34,560.00 |
| 6 | 9ನೇ ತರಗತಿ | | 606 | 570 | 1730 | 10,48,380.00 | 9,86,100.00 | 20,34,480.00 |
| 7 | 10ನೇ ತರಗತಿ | | 606 | 570 | 1570 | 9,51,420.00 | 8,94,900.00 | 18,46,320.00 |
| **ಒಟ್ಟು** | | | | | **7910** | **40,93,530.00** | **26,23,440.00** | **67,16,970.00** |
| **ಸಮಗ್ರ ಮೊತ್ತ** | | | | | **14,170** | **68,17,420.00** | **41,51,880.00** | **1,09,69,300.00** |

(ಒಂದು ಕೋಟಿ ಒಂಬತ್ತು ಲಕ್ಷದ ಅರವತ್ತೊಂಬತ್ತು ಸಾವಿರದ ಮೂರು ನೂರು ಮಾತ್ರ)

18/10/13

ಅಧ್ಯಕ್ಷರು
ಶಿಕ್ಷಣ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ವಿದ್ಯಾರ್ಥಿಗಳ ಅಂದಾಜು ಸಂಖ್ಯಾಬಲಕ್ಕನುಗುಣವಾಗಿ ಮೇಲ್ಕಂಡ ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಶಾಲೆಗಳಲ್ಲಿ ದಾಖಲಾತಿ ನಡೆಯುತ್ತಿರುವುದರಿಂದ, ಅಂದಾಜು ಸಂಖ್ಯಾಬಲ ಹೆಚ್ಚು ಕಡಿಮೆಯಾಗುವ ಸಂಭವವಿರುವುದರಿಂದ ದಾಖಲಾತಿಯನ್ವಯ ಶಾಲಾ ಮುಖ್ಯಸ್ಥರುಗಳ ಬೇಡಿಕೆಗನುಗುಣವಾಗಿ ಸಮವಸ್ತ್ರಗಳನ್ನು ವಿತರಣೆ ಮಾಡಿ, ಸಂಬಂಧಿಸಿದ ಮೊತ್ತಕ್ಕೆ ಬಿಲ್ಲನ್ನು ಕ್ಲೈಮ್ ಮಾಡಲಾಗುವುದು. ಶ್ರೀ.ಬಿ.ರುಡ್, ಜಮೀರ್ ಅಹಮದ್ ಖಾನ್, ಶಾಸಕರು, ಚಾಮರಾಜಪೇಟೆ ಕ್ಷೇತ್ರ ರವರು ಮಾನ್ಯ ಆಯುಕ್ತರವರಿಗೆ ಪತ್ರವನ್ನು ವಿಳಾಸ ಮಾಡಿ ರಾಯಪುರಂ ವಾರ್ಡ್ ಸಂಖ್ಯೆ 137ರಲ್ಲಿ ಇರುವ ಬಿ.ಬಿ.ಎಂ.ಪಿ. ಬಾಲಕಿಯರ ಪ್ರೌಢ ಶಾಲೆಯಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಮುಸ್ಲಿಂ ಸಮುದಾಯದ ಹೆಣ್ಣು ಮಕ್ಕಳು ದಾಖಲಾಗಿರುತ್ತಾರೆ. ಸದರಿ ಮಕ್ಕಳ ತಂದೆ-ತಾಯಂದಿರ ಒತ್ತಾಯವೇನೆಂದರೆ, ತಾವುಗಳು ಶಾಲಾ ಹೆಣ್ಣು ಮಕ್ಕಳಿಗೆ ನೀಡುತ್ತಿರುವ ಸಮವಸ್ತ್ರವು ಸ್ಕರ್ಟ್ ಆಗಿದ್ದು, ಅದರ ಬದಲಿಗೆ ಚೂಡಿದಾರ ಸಮವಸ್ತ್ರವನ್ನು ಒದಗಿಸಬೇಕೆಂದು ಕೋರಿರುತ್ತಾರೆ. ಆದ್ದರಿಂದ, ತಾವುಗಳು ಸ್ಕರ್ಟ್ ಬದಲಿಗೆ ಚೂಡಿದಾರ ಮಾದರಿ ಸಮವಸ್ತ್ರವನ್ನು ನೀಡಲು ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಸೂಚಿಸಬೇಕಾಗಿ ಕೋರಿರುತ್ತಾರೆ. ಕಂಡಿಕೆ (15) ರಲ್ಲಿ ವಿಶೇಷ ಆಯುಕ್ತರು(ಯೋಜನೆ)ರವರು ಸಮವಸ್ತ್ರವು ಏಕರೂಪವಾದ್ದರಿಂದ ಹಾಗೂ ಸದರಿ ನಿರ್ಣಯವನ್ನು ಪಾಲಿಕೆಯ ಅನುಮೋದನೆಗೆ ಮಂಡಿಸಲು ಕಾಲಾವಕಾಶಬೇಕಾದ್ದರಿಂದ, ಈ ವರ್ಷ ಪರಿಗಣಿಸಲು ಆಗಲ್ಲವೆಂದು ತಿಳಿಸಿರುತ್ತಾರೆ.

ಈಗಾಗಲೇ 01.06.2013ರಿಂದ ಶಾಲೆಗಳು ಪ್ರಾರಂಭವಾಗಿರುವುದರಿಂದ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶಿಕ್ಷಣ ಸ್ಥಾಯಿ ಸಮಿತಿಯ ಘಟನೋತ್ತರ ಅನುಮೋದನೆಯನ್ನು ನಿರೀಕ್ಷಿಸಿ ಮೆ: ದಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ರವರಿಗೆ ಉತ್ತಮ ಗುಣಮಟ್ಟದ ಸಮವಸ್ತ್ರಗಳನ್ನು ಸರಬರಾಜು ಮಾಡುವಂತೆ ಆದೇಶ ನೀಡಲಾಗಿದ್ದು ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ: 20.08.2013ರ ಟಿಪ್ಪಣಿ ಬಗ್ಗೆ.

ಮುಂದುವರೆದು, 2013-14ನೇ ಸಾಲಿನಲ್ಲಿ ಉದ್ದೇಶಿತ ಕಾರ್ಯಕ್ರಮಕ್ಕೆ ನಿಗದಿಪಡಿಸಿರುವ ಅಂದಾಜು ಆಯವ್ಯಯದ ಅನುಮೋದನೆಯನ್ನು ನಿರೀಕ್ಷಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಿಶುವಿಹಾರದಿಂದ ಪ್ರೌಢ ಶಾಲೆವರೆಗೆ ವ್ಯಾಸಂಗ ಮಾಡುವ ಸುಮಾರು 14170 ಮಂದಿ ಸಕಲ ವರ್ಗದ ವಿದ್ಯಾರ್ಥಿಗಳಿಗೆ ಶಾಲಾ ಸಮವಸ್ತ್ರಗಳನ್ನು ರೂ.109,69,300.00ಗಳನ್ನು ಹಾಗೂ ವಿದ್ಯಾರ್ಥಿಗಳು ಹೆಚ್ಚುವರಿ ದಾಖಲಾತಿಯಾದಲ್ಲಿ ಅವರಿಗೂ, ಅವರ ಸಮವಸ್ತ್ರಗಳಿಗೂ ಸಹ ತಗಲುವ ವೆಚ್ಚವನ್ನು ನಿರೀಕ್ಷಿಸಿ 1999ರ ಪಾರದರ್ಶಕ ಕಾಯಿದೆ ಪ್ರಕಾರ ವಿನಾಯಿತಿ ಇರುವುದರಿಂದ, ನೇರವಾಗಿ ಮೆ: ದಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ರವರಿಂದ ಅವಶ್ಯಕತೆ ಇರುವ ಪ್ರಮಾಣದಷ್ಟು ಸಮವಸ್ತ್ರಗಳನ್ನು ಮಾತ್ರ ಖರೀದಿಸಲು ಲೆಕ್ಕ ಶೀರ್ಷಿಕ 25 ಶಿಕ್ಷಣ, ಶೈಕ್ಷಣಿಕ ಅಭಿವೃದ್ಧಿ ಚಟುವಟಿಕೆಗಳು, ವಿದ್ಯಾರ್ಥಿಗಳಿಗೆ ಸಮವಸ್ತ್ರದ ವೆಚ್ಚಗಳ ವಿತರಣೆಗೆ ಮೀಸಲಿರಿಸಿರುವ ಅನುದಾನದ ಮೊತ್ತ ರೂ.150.00 ಲಕ್ಷಗಳಲ್ಲಿ ಮೇಲ್ಕಂಡ ವೆಚ್ಚವನ್ನು ಭರಿಸಲು ಮತ್ತು ಮೆ: ದಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ರವರಿಗೆ ಸರಬರಾಜು ಆದೇಶ ನೀಡಲಾಗಿದ್ದು, ಈಗಾಗಲೇ ಆಯುಕ್ತರವರ ಪತ್ರದ ಸಂಖ್ಯೆ: ವಿದ್ಯಾ(4ಎ)ಪಿಆರ್/09/13-14, ದಿನಾಂಕ: 20.08.2013ರ ಟಿಪ್ಪಣಿ ಬಗ್ಗೆ ತೆಗೆದುಕೊಂಡ ಕ್ರಮಕ್ಕೆ ಸ್ಥಿರೀಕರಣ ಮಾಡುವ ಬಗ್ಗೆ ಅನುಮೋದನೆ ಕೋರಿ ಶಿಕ್ಷಣ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ ಬಗ್ಗೆ.

**ದಿನಾಂಕ: 09.10.2013ರ ನಿರ್ಣಯ:**

ದಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆ ರವರಿಗೆ ಪಾಲಿಕೆಯ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಸಮವಸ್ತ್ರ ಸರಬರಾಜು ಮಾಡಲು ಆಯುಕ್ತರ ದಿನಾಂಕ:20.08.2013ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರಬರಾಜು ಆದೇಶವನ್ನು ನೀಡಿರುವುದನ್ನು ಸ್ಥಿರೀಕರಿಸಲು ಸಮಿತಿಯು ತೀರ್ಮಾನಿಸಿತು.

03. **ವಿಷಯ ಸಂಖ್ಯೆ: ಶಿ.ಸ್ಥಾ.ಸ/3/13-14**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 90 ಶಿಶುವಿಹಾರಗಳು, 13 ಪ್ರಾಥಮಿಕ ಶಾಲೆಗಳು ಮತ್ತು 34 ಪ್ರೌಢ ಶಾಲೆಗಳ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶೂ ಮತ್ತು ಸಾಕ್ಸ್‌ಗಳ ಖರೀದಿಗಾಗಿ 2013-14ನೇ ಸಾಲಿನ ಆಯವ್ಯಯದಲ್ಲಿ, ಈ ಕೆಳಕಂಡಂತೆ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ.

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆಯ ಹೆಸರು | ಅಂದಾಜು ಆಯವ್ಯಯ (ಲಕ್ಷಗಳಲ್ಲಿ) ರೂ. ಪೈ. |
|---|---|---|
| 1 | ಶಿಶುವಿಹಾರ ಮತ್ತು ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಶೂಗಳ ವಿತರಣೆ | 50.00 |
| 2 | ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಶೂಗಳ ವಿತರಣೆ | 80.00 |
| 3. | ಶಿಶುವಿಹಾರದಿಂದ ಪ್ರೌಢ ಶಾಲೆಗಳಿಗೆ ಕಾಲು ಚೀಲಗಳ ವಿತರಣೆ | 05.00 |
| | ಒಟ್ಟು | 135.00 |

ಅಧ್ಯಕ್ಷರು 18/10/12

ಶಿಕ್ಷಣ ಸ್ಥಾಯಿ ಸಮಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮೇಲ್ಕಂಡ ಲೆಕ್ಕ ಶೀರ್ಷಿಕೆಗಳ ಒಟ್ಟು ಮೊತ್ತದಲ್ಲಿ ಶೂ ಮತ್ತು ಕಾಲು ಚೀಲಗಳನ್ನು ಖರೀದಿಸಲು ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ (ದ್ವಿ-ಲಕೋಟೆ ಪದ್ಧತಿ) ಮೂಲಕ ಕರೆಯಲಾಗಿದ್ದು, ಟೆಂಡರ್‌ನ ಸ್ವೀಕೃತಿಗೆ ಕೊನೆಯ ದಿನಾಂಕ: 08.07.2013 ಆಗಿದ್ದು, ದಿನಾಂಕ: 10.07.2013ರಂದು ಟೆಕ್ನಿಕಲ್ ಬಿಡ್‌ನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ 1) ಮೆ: ಅಬರ್ಟಿ ಶೂ ಅ., 2) ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರುಗಳು ಭಾಗವಹಿಸಿರುತ್ತಾರೆ. ಮೇಲ್ಕಂಡ ಇಬ್ಬರು ಟೆಂಡರ್‌ದಾರರುಗಳ ಟೆಕ್ನಿಕಲ್ ಬಿಡ್‌ನಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನು ವಿಷಯ ಪರಿವೀಕ್ಷಕರು, ವ್ಯವಸ್ಥಾಪಕರು ಹಾಗೂ ವಿಷಯ ನಿರ್ವಾಹಕರುಗಳ ಸಮ್ಮುಖದಲ್ಲಿ ಪರಿಶೀಲಿಸಿದಾಗ ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರು ಮಾತ್ರ ಪೂರ್ಣ ದಾಖಲಾತಿ ಪ್ರತಿಗಳನ್ನು ಸಲ್ಲಿಸಿರುವುದು ಕಂಡು ಬಂದಿರುತ್ತದೆ. ಮೆ: ಅಬರ್ಟಿ ಶೂ ಅ., ರವರು ಟೆಂಡರ್‌ನ ನಿಯಮ ನಿಬಂಧನೆಗಳಲ್ಲಿ ತಿಳಿಸಿರುವ ದಾಖಲಾತಿಗಳನ್ನು ಸಮರ್ಪಕವಾಗಿ ಸಲ್ಲಿಸಿರುವುದಿಲ್ಲ. ವಿವರ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಟೆಂಟರ್‌ನಲ್ಲಿನ ನಿಬಂಧನೆಗಳು | ಷರಾ |
|---|---|---|
| 13 (b) | VAT clearance certificate for two years (2010-11 & 2011-12) | 2009-10ನೇ ಸಾಲಿನ ವ್ಯಾಟ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ಮಾತ್ರ ಸಲ್ಲಿಸಿದ್ದು ಹಾಗೂ 15.04.13ರ ಚಲನ್ ಪ್ರತಿಯನ್ನು ಮಾತ್ರ ಅಪ್‌ಲೋಡ್ ಮಾಡಿರುತ್ತಾರೆ. **ಟೆಂಡರ್‌ನ ನಿಬಂಧನೆ ಪ್ರಕಾರ 2010-11 & 2011-12ರ ವ್ಯಾಟ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ಅಪ್‌ಲೋಡ್ ಮಾಡಿರುವುದಿಲ್ಲ.** |
| (d) | SSI certificate manufacturing of Foot Wear | **ಟೆಂಡರ್‌ನ ನಿಬಂಧನೆ ಪ್ರಕಾರ ಎಸ್.ಎಸ್.ಐ ಸರ್ಟಿಫಿಕೇಟ್ ಅಫ್‌ಲೋಡ್ ಮಾಡಿರುವುದಿಲ್ಲ.** |
| (f) | Recently obtained Bank solvency certificate for Rs.1.00 crore | ಟೆಂಡರ್‌ನ ನಿಬಂಧನೆಯಂತೆ ಇತ್ತೀಚಿನ ಬ್ಯಾಂಕ್ ಸಾಲ್ವೆನ್ಸಿ ಪ್ರಮಾಣ ಪತ್ರವನ್ನು ಅಫ್‌ಲೋಡ್ ಮಾಡಬೇಕಾಗಿರುತ್ತದೆ. ಆದರೆ, ಸದರಿ ಸಂಸ್ಥೆಯವರು ಕಳೆದ ವರ್ಷದ (19.09.2012) ಸಾಲ್ವೆನ್ಸಿ ಸರ್ಟಿಫಿಕೇಟ್ ಅಫ್‌ಲೋಡ್ ಮಾಡಿರುತ್ತಾರೆ. **ಟೆಂಡರ್ ಆಹ್ವಾನಿಸಿದ ವರ್ಷದಲ್ಲಿ ಸಾಲ್ವೆನ್ಸಿ ಪಡೆದಿರಬೇಕಾಗುತ್ತದೆ.** |

ಟೆಂಡರ್‌ನ ನಿಯಮ ನಿಬಂಧನೆಯಲ್ಲಿ ತಿಳಿಸಿರುವಂತೆ ಟೆಂಡರ್‌ನ ಟೆಕ್ನಿಕಲ್ ಬಿಡ್‌ನಲ್ಲಿ ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರು ಮಾತ್ರ ಪೂರ್ಣ ದಾಖಲೆ ಪ್ರತಿಗಳನ್ನು ಸಲ್ಲಿರುವ ಕಾರಣ, ಇವರನ್ನು ಟೆಂಡರ್‌ನ ಟೆಕ್ನಿಕಲ್ ಬಿಡ್‌ನಲ್ಲಿ ಅರ್ಹ ಟೆಂಡರ್‌ದಾರರೆಂದು ಪರಿಗಣಿಸಲಾಗಿದೆ. ಮೆ: ಅಬರ್ಟಿ ಟೆಂಡರ್‌ನ ನಿಯಮ ನಿಬಂಧನೆ ಪ್ರಕಾರ ಮೇಲ್ಕಂಡ ಕೆಲವು ಸಮಂಜಸವಾದ ದಾಖಲೆ ಪ್ರತಿಗಳನ್ನು ಸಲ್ಲಿಸಿರುವುದಿಲ್ಲವಾದ್ದರಿಂದ, ಇವರ ಟೆಕ್ನಿಕಲ್ ಬಿಡ್‌ನ್ನು ಅನರ್ಹಗೊಳಿಸಲಾಗಿದೆ. ಟೆಕ್ನಿಲ್ ಬಿಡ್‌ನಲ್ಲಿ ಅರ್ಹತೆ ಹೊಂದಿರುವ ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರ Financial bidನ್ನು ದಿನಾಂಕ: 18.07.2013ರಂದು ತೆರೆಯಲಾಯಿತು. ಸದರಿಯವರು ಸಲ್ಲಿಸಿರುವ ಮಾದರಿ ಶೂ ಮತ್ತು ಕಾಲುಚೀಲಗಳನ್ನು ವಿದ್ಯಾಧಿಕಾರಿ ಮತ್ತು ಸಹಾಯಕ ವಿದ್ಯಾಧಿಕಾರಿ ಇವರುಗಳ ಸಮ್ಮುಖದಲ್ಲಿ ಟೆಂಡರ್‌ನಲ್ಲಿ ತಿಳಿಸಿರುವ ಅಳತೆ, ವಿನ್ಯಾಸ ಮತ್ತು ಗುಣಮಟ್ಟದ ಬಗ್ಗೆ ಮೆ: ಎಸ್.ಜಿ.ಎಸ್. ಇಂಡಿಯಾ ಅ., ಕ್ವಾಲಿಟಿ ಟೆಸ್ಟಿಂಗ್ ಅಂಡ್ ವೆರಿಫಿಕೇಷನ್ ಕಂಪನಿ, ಬಿ.ಟಿ.ಎಂ, ಲೇಔಟ್, ಬೆಂಗಳೂರು ರವರು ದೃಢೀಕರಿಸಿರುವ ಪ್ರಮಾಣ ಪತ್ರದೊಂದಿಗೆ ಪರಿಶೀಲಿಸಲಾಗಿದ್ದು, ಉತ್ತಮ ಗುಣಮಟ್ಟದಲ್ಲಿ ಇರುವುದು ಕಂಡು ಬಂದಿರುತ್ತದೆ.

2013-14ನೇ ಸಾಲಿನಲ್ಲಿ ಅವಶ್ಯಕತೆ ಇರುವ ಪ್ರಮಾಣದಷ್ಟು ಉತ್ತಮ ಗುಣಮಟ್ಟದ ಶೂ ಮತ್ತು ಕಾಲುಚೀಲಗಳನ್ನು ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರು ನೀಡಿರುವ ಟೆಂಡರ್‌ನ ಕಡಿಮೆ ದರದಲ್ಲಿ ಖರೀದಿಸಲು, ಅಂದಾಜು ಖರೀದಿ ವೆಚ್ಚದ ಒಟ್ಟು ಮೊತ್ತ ಈ ಕೆಳಕಂಡಂತೆ ಇರುತ್ತದೆ.

16/10/13

ಅಧ್ಯಕ್ಷರು
ಶಿಕ್ಷಣ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

| Sl. No. | Particulars | Quantity Nos. | Rates Rs.Ps. | Total Amount Rs.Ps. |
|---|---|---|---|---|
| 1 | Nursery Boys(3 yrs to 5 yrs) Black leather shoes with lays | 2450 | 326.00 | 7,98,700.00 |
| 2 | Nursery Girls(3 yrs to 5 yrs) Black leather shoes with belt | 2300 | 337.00 | 7,75,100.00 |
| 3 | Primary Boys (1st to 4th Std) Black leather shoes with lays | 575 | 339.00 | 1,94,925.00 |
| 4 | Primary Girls(1st to 4th Std) Black leather shoes with belt | 520 | 348.00 | 1,80,960.00 |
| 5 | Primary Boys (5st to 7th Std) Black leather shoes with lays | 525 | 340.00 | 1,78,500.00 |
| 6 | Primary Girls (5st to 7th Std) Black leather shoes with belt | 410 | 340.00 | 1,39,400.00 |
| 7 | High School Boys(8th to 10th Std) Black leather shoes with lays | 2710 | 469.00 | 12,70,990.00 |
| 8 | High School Girls (8th to 10th Std) Black leather shoes with belt | 4680 | 493.00 | 23,07,240.00 |
| 9 | High School Boys(8th to 10th Std) white canvas shoes with lays | 2710 | 224.00 | 6,07,040.00 |
| 10 | High School Girls (8th to 10th Std) white canvas shoes with lays | 4680 | 224.00 | 10,48,320.00 |
| 11 | Nursery boys & girls black socks | 4750 | 27.00 | 1,28,250.00 |
| 12 | Primary boys & girls black socks | 2030 | 29.00 | 58,870.00 |
| 13 | High School boys & girls black socks | 7390 | 37.00 | 2,73,430.00 |
| 14 | High School boys & girls white socks | 7390 | 29.00 | 2,14,310.00 |
| | | | **Total** | **81,76,035.00** |

(Rupees Eighty One Lakhs Seventy Six Thousand & Thirty Five Only)

ವಿದ್ಯಾರ್ಥಿಗಳ ಅಂದಾಜು ಸಂಖ್ಯಾಬಲಕ್ಕನುಗುಣವಾಗಿ ಮೇಲ್ಕಂಡ ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಶಾಲೆಗಳಲ್ಲಿ ದಾಖಲಾತಿ ನಡೆಯುತ್ತಿರುವುದರಿಂದ, ಅಂದಾಜು ಸಂಖ್ಯಾಬಲ ಹೆಚ್ಚು ಕಡಿಮೆಯಾಗುವ ಸಂಭವವಿರುವುದರಿಂದ, ದಾಖಲಾತಿಯನ್ವಯ ಶಾಲಾ ಮುಖ್ಯಸ್ಥರುಗಳ ಬೇಡಿಕೆಗನುಗುಣವಾಗಿ ಶೂ ಮತ್ತು ಸಾಕ್ಸ್‌ಗಳನ್ನು ವಿತರಣೆ ಮಾಡಿ, ಸಂಬಂಧಿಸಿದ ಮೊತ್ತಕ್ಕೆ ಬಿಲ್ಲನ್ನು ಕ್ಲೈಮ್ ಮಾಡಲಾಗುವುದು. ಮೇಲ್ಕಂಡ ಖರೀದಿ ವೆಚ್ಚದ ಒಟ್ಟು ಅಂದಾಜು ಮೊತ್ತ ರೂ.81,76,035.00ಗಳನ್ನು ಕಂಡಿಕೆ-(4)ರಲ್ಲಿ ನಮೂದಿಸಿರುವ ಆಯವ್ಯಯದ ಶೀರ್ಷಿಕೆಯಲ್ಲಿ ನಿಗದಿಪಡಿಸಿರುವ ಒಟ್ಟು ಮೊತ್ತ ರೂ.135.00 ಲಕ್ಷಗಳಲ್ಲಿ ಭರಿಸಿ ಅವಶ್ಯಕತೆ ಇರುವ ಪ್ರಮಾಣದಷ್ಟು ಶೂ ಮತ್ತು ಸಾಕ್ಸ್‌ಗಳನ್ನು ಕರ್ನಾಟಕ ಪಾರದರ್ಶಕ ನಿಯಮಾನುಸಾರ ಟೆಂಡರ್‌ನ ಕಡಿಮೆ ದರ ನೀಡಿರುವ ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರಿಂದ ಖರೀದಿಸಬಹುದಾಗಿರುತ್ತದೆ. ಸದರಿ ಖರೀದಿ ವೆಚ್ಚದ ಒಟ್ಟು ಮೊತ್ತ ರೂ.81,76,035.00ಗಳನ್ನು ಮಂಜೂರು ಮಾಡಲು ಹಾಗೂ ಈಗಾಗಲೇ 01.06.2013ರಿಂದ ಶಾಲೆಗಳು ಪ್ರಾರಂಭವಾಗಿರುವುದರಿಂದ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರಿಗೆ ಶೂ ಮತ್ತು ಸಾಕ್ಸ್‌ಗಳನ್ನು ಅತೀ ಜರೂರಾಗಿ ಸರಬರಾಜು ಮಾಡುವಂತೆ ಸರಬರಾಜು ಆದೇಶ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಶಿಕ್ಷಣ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರವರ ಪತ್ರದ ಸಂಖ್ಯೆ: ವಿದ್ಯಾ(4ಎ)ಪಿಆರ್/04/13-14, ದಿನಾಂಕ: 03.08.2013ರ ಟಿಪ್ಪಣಿ ಬಗ್ಗೆ.

**"ಹೆಚ್ಚಿನ ಚರ್ಚೆಗಾಗಿ ಮುಂದೂಡಿದೆ"**

ಎ.ಕೋದಂಡ ರೆಡ್ಡಿ,
ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,

ಪ್ರತಿಯನ್ನು:

1) ಮಹಾ ಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
2) ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
3) ಆಡಳಿತ ಪಕ್ಷ/ವಿರೋಧ ಪಕ್ಷ ಹಾಗೂ ಜೆ.ಡಿ.ಎಸ್. ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
4) ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತ ರವರ ಅವಗಾಹನೆಗೆ ತರಲು ಕೋರಿದೆ.
5) ವಿಶೇಷ ಆಯುಕ್ತರು(ಯೋಜನೆ)ರವರ ಅವಗಾಹನೆಗಾಗಿ ಕಳುಹಸಿದೆ.
6) ಅಪರ ಆಯುಕ್ತರು (ಶಿಕ್ಷಣ)ರವರ ಅವಗಾಹನೆಗಾಗಿ ಕಳುಹಿಸಿದೆ.
7) ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಅಂತರ್ಜಾಲದಲ್ಲಿ ಅಳವಡಿಸಲು ಸೂಕ್ತ ಕ್ರಮವಹಿಸುವಂತೆ ಸೂಚಿಸಿದೆ.
8) ಶಿಕ್ಷಣಾಧಿಕಾರಿ/ಕ್ರೀಡಾಧಿಕಾರಿ ಮತ್ತು ದೈಹಿಕ ಶಿಕ್ಷಣಾಧಿಕಾರಿ ರವರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
9) ಕಛೇರಿ ಕಡತಕ್ಕೆ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ಶಿಕ್ಷಣ ಸ್ಥಾಯಿ ಸಮಿತಿಯು ದಿನಾಂಕ: 23.10.2013ರಂದು ನಡೆದ ಸಭೆಯ ನಡವಳಿಗಳು.

| ಕ್ರ. ಸ | ಅಧ್ಯಕ್ಷರು ಹಾಗೂ ಸದಸ್ಯರು ಶ್ರೀಯುತರುಗಳಾದ | ಪದನಾಮ | ಕ್ರ. ಸ | ಹಾಜರಿದ್ದ ಅಧಿಕಾರಿಗಳ ಹೆಸರು ಶ್ರೀಯುತರುಗಳಾದ | ಪದನಾಮ |
|---|---|---|---|---|---|
| 1 | ಎ.ಕೋದಂಡ ರೆಡ್ಡಿ | ಅಧ್ಯಕ್ಷರು | 1 | ಡಾ: ಬಿ.ಎಸ್.ಮಂಜುನಾಥ ಸ್ವಾಮಿ | ಶಿಕ್ಷಣಾಧಿಕಾರಿಗಳು |
| 2 | ತೇಜಸ್ವಿನಿ ಎನ್.ರಾಜು | ಸದಸ್ಯರು | 2 | ಮಾರಿಯೋ ಪೈರೀಸ್ | ಸ.ಕೌನ್ಸಿಲ್ ಕಾರ್ಯದರ್ಶಿ |
| 3 | ಶಶಿಕಲಾ ಕೃಷ್ಣೇಗೌಡ | ಸದಸ್ಯರು | 3 | ಬಿ.ಆರ್.ತಾರಾಮತಿ | ಅ.ಶಿ.ಅ(ಪೂರ್ವ) |
| 4 | ಡಾ:ಎಸ್.ರಾಜು | ಸದಸ್ಯರು | 4 | ಶ್ರೀ.ವಿ.ವೆಂಕಟಕೃಷ್ಣಪ್ಪ | ದೈಹಿಕ ಶಿಕ್ಷಣಾಧಿಕಾರಿ |
| 5 | ವೈ.ಎನ್.ಅಶ್ವಥ್ | ಸದಸ್ಯರು | 5 | ಜಿ.ಎಸ್.ನಾಗರಾಜು | ಕ್ರೀಡಾಧಿಕಾರಿ |
| 6 | ಪಿ.ಸುಗುಮಾರ್(ಸುಗುಣ್) | ಸದಸ್ಯರು | 6 | ಶ್ರೀ.ಡಿ.ಪಿ.ಮಹೇಂದ್ರ ಸ್ವಾಮಿ | ಕ್ರೀಡಾಂಗಣದ ಮೇಲ್ವಿಚಾರಕರು |
| 7 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | | | |
| 8 | ಬಿ.ಎನ್.ಕೋಕಿಲಾ | ಸದಸ್ಯರು | | | |
| 9 | ನೂರ್ ಜಹಾನ್ | ಸದಸ್ಯರು | | | |

ಸಭೆಯು ಬೆಳ್ಳಿಗೆ 11.00 ಘಂಟೆಗೆ ಪ್ರಾರಂಭವಾಗಿದ್ದು, ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರುಗಳನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭೆಯ ನಡಾವಳಿಕೆಗಳನ್ನು ಓದಿ ದಾಖಲು ಮಾಡಲಾಯ್ತು. ಹಾಗೂ ಕಾರ್ಯ ಕ್ರಮದಪಟ್ಟಿಯಲ್ಲಿರುವ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವಂತೆ ಎಲ್ಲಾ ಸದಸ್ಯರ ಸಹಕಾರವನ್ನು ಕೋರಲಾಯ್ತು.

1. **ವಿಷಯ ಸಂಖ್ಯೆ: ಶಿ.ಸ್ಥಾ.ಸ/3/13-14**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 90 ಶಿಶುವಿಹಾರಗಳು, 13 ಪ್ರಾಥಮಿಕ ಶಾಲೆಗಳು ಮತ್ತು 34 ಪ್ರೌಢ ಶಾಲೆಗಳ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶೂ ಮತ್ತು ಸಾಕ್ಸ್‌ಗಳ ಖರೀದಿಗಾಗಿ 2013-14ನೇ ಸಾಲಿನ ಆಯವ್ಯಯದಲ್ಲಿ, ಈ ಕೆಳಕಂಡಂತೆ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ.

| ಕ್ರಮ ಸಂಖ್ಯೆ | ಲೆಕ್ಕ ಶೀರ್ಷಿಕೆಯ ಹೆಸರು | ಅಂದಾಜು ಆಯವ್ಯಯ (ಲಕ್ಷಗಳಲ್ಲಿ) ರೂ. ಪೈ. |
|---|---|---|
| 1 | ಶಿಶುವಿಹಾರ ಮತ್ತು ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಶೂಗಳ ವಿತರಣೆ | 50.00 |
| 2 | ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಶೂಗಳ ವಿತರಣೆ | 80.00 |
| 3. | ಶಿಶುವಿಹಾರದಿಂದ ಪ್ರೌಢ ಶಾಲೆಗಳಿಗೆ ಕಾಲು ಚೀಲಗಳ ವಿತರಣೆ | 05.00 |
| | ಒಟ್ಟು | 135.00 |

ಮೇಲ್ಕಂಡ ಲೆಕ್ಕ ಶೀರ್ಷಿಕೆಗಳ ಒಟ್ಟು ಮೊತ್ತದಲ್ಲಿ ಶೂ ಮತ್ತು ಕಾಲು ಚೀಲಗಳನ್ನು ಖರೀದಿಸಲು ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ (ದ್ವಿ-ಲಕೋಟೆ ಪದ್ಧತಿ) ಮೂಲಕ ಕರೆಯಲಾಗಿದ್ದು, ಟೆಂಡರ್‌ನ ಸ್ವೀಕೃತಿಗೆ ಕೊನೆಯ ದಿನಾಂಕ: 08.07.2013 ಆಗಿದ್ದು, ದಿನಾಂಕ: 10.07.2013ರಂದು ಟೆಕ್ನಿಕಲ್ ಬಿಡ್‌ನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ 1) ಮೆ: ಅಬರ್ಚಿ ಶೂ ಅ., 2) ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರುಗಳು ಭಾಗವಹಿಸಿರುತ್ತಾರೆ. ಮೇಲ್ಕಂಡ ಇಬ್ಬರು ಟೆಂಡರ್‌ದಾರರುಗಳ ಟೆಕ್ನಿಕಲ್ ಬಿಡ್‌ನಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನು ವಿಷಯ ಪರಿವೀಕ್ಷಕರು, ವ್ಯವಸ್ಥಾಪಕರು ಹಾಗೂ ವಿಷಯ ನಿರ್ವಾಹಕರುಗಳ ಸಮ್ಮುಖದಲ್ಲಿ ಪರಿಶೀಲಿಸಿದಾಗ ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರು ಮಾತ್ರ ಪೂರ್ಣ ದಾಖಲಾತಿ ಪ್ರತಿಗಳನ್ನು ಸಲ್ಲಿಸಿರುವುದು ಕಂಡು ಬಂದಿರುತ್ತದೆ. ಮೆ: ಅಬರ್ಚಿ ಶೂ ಅ., ರವರು ಟೆಂಡರ್‌ನ ನಿಯಮ ನಿಬಂಧನೆಗಳಲ್ಲಿ ತಿಳಿಸಿರುವ ದಾಖಲಾತಿಗಳನ್ನು ಸಮರ್ಪಕವಾಗಿ ಸಲ್ಲಿಸಿರುವುದಿಲ್ಲ. ವಿವರ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಟೆಂಟರ್‌ನಲ್ಲಿನ ನಿಬಂಧನೆಗಳು | ಷರಾ |
|---|---|---|
| 13 (b) | VAT clearance certificate for two years (2010-11 & 2011-12) | 2009-10ನೇ ಸಾಲಿನ ವ್ಯಾಟ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ಮಾತ್ರ ಸಲ್ಲಿಸಿದ್ದು ಹಾಗೂ 15.04.13ರ ಚಲನ್ ಪ್ರತಿಯನ್ನು ಮಾತ್ರ ಅಪ್‌ಲೋಡ್ ಮಾಡಿರುತ್ತಾರೆ. **ಟೆಂಡರ್‌ನ ನಿಬಂಧನೆ ಪ್ರಕಾರ 2010-11 & 2011-12ರ ವ್ಯಾಟ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ಅಪ್‌ಲೋಡ್ ಮಾಡಿರುವುದಿಲ್ಲ.** |
| (d) | SSI certificate manufacturing of Foot Wear | **ಟೆಂಡರ್‌ನ ನಿಬಂಧನೆ ಪ್ರಕಾರ ಎಸ್.ಎಸ್.ಐ ಸರ್ಟಿಫಿಕೇಟ್ ಅಫ್‌ಲೋಡ್ ಮಾಡಿರುವುದಿಲ್ಲ.** |
| (f) | Recently obtained Bank solvency certificate for Rs.1.00 crore | ಟೆಂಡರ್‌ನ ನಿಬಂಧನೆಯಂತೆ ಇತ್ತೀಚಿನ ಬ್ಯಾಂಕ್ ಸಾಲ್ವೆನ್ಸಿ ಪ್ರಮಾಣ ಪತ್ರವನ್ನು ಅಫ್‌ಲೋಡ್ ಮಾಡಬೇಕಾಗಿರುತ್ತದೆ. ಆದರೆ, ಸದರಿ ಸಂಸ್ಥೆಯವರು ಕಳೆದ ವರ್ಷದ (19.09.2012) ಸಾಲ್ವೆನ್ಸಿ ಸರ್ಟಿಫಿಕೇಟ್ ಅಫ್‌ಲೋಡ್ ಮಾಡಿರುತ್ತಾರೆ. **ಟೆಂಡರ್ ಆಹ್ವಾನಿಸಿದ ವರ್ಷದಲ್ಲಿ ಸಾಲ್ವೆನ್ಸಿ ಪಡೆದಿರಬೇಕಾಗುತ್ತದೆ.** |

ಟೆಂಡರ್‌ನ ನಿಯಮ ನಿಬಂಧನೆಯಲ್ಲಿ ತಿಳಿಸಿರುವಂತೆ ಟೆಂಡರ್‌ನ ಟೆಕ್ನಿಕಲ್ ಬಿಡ್‌ನಲ್ಲಿ ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರು ಮಾತ್ರ ಪೂರ್ಣ ದಾಖಲೆ ಪ್ರತಿಗಳನ್ನು ಸಲ್ಲಿರುವ ಕಾರಣ, ಇವರನ್ನು ಟೆಂಡರ್‌ನ ಟೆಕ್ನಿಕಲ್ ಬಿಡ್‌ನಲ್ಲಿ ಅರ್ಹ ಟೆಂಡರ್‌ದಾರರೆಂದು ಪರಿಗಣಿಸಲಾಗಿದೆ. ಮೆ: ಅಬರ್ಟ ಟೆಂಡರ್‌ನ ನಿಯಮ ನಿಬಂಧನೆ ಪ್ರಕಾರ ಮೇಲ್ಕಂಡ ಕೆಲವು ಸಮಂಜಸವಾದ ದಾಖಲೆ ಪ್ರತಿಗಳನ್ನು ಸಲ್ಲಿಸಿರುವುದಿಲ್ಲವಾದ್ದರಿಂದ, ಇವರ ಟೆಕ್ನಿಕಲ್ ಬಿಡ್‌ನ್ನು ಅನರ್ಹಗೊಳಿಸಲಾಗಿದೆ. ಟೆಕ್ನಿಲ್ ಬಿಡ್‌ನಲ್ಲಿ ಅರ್ಹತೆ ಹೊಂದಿರುವ ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರ Financial bidನ್ನು ದಿನಾಂಕ: 18.07.2013ರಂದು ತೆರೆಯಲಾಯಿತು. ಸದರಿಯವರು ಸಲ್ಲಿಸಿರುವ ಮಾದರಿ ಶೂ ಮತ್ತು ಕಾಲುಚೀಲಗಳನ್ನು ವಿದ್ಯಾಧಿಕಾರಿ ಮತ್ತು ಸಹಾಯಕ ವಿದ್ಯಾಧಿಕಾರಿ ಇವರುಗಳ ಸಮ್ಮುಖದಲ್ಲಿ ಟೆಂಡರ್‌ನಲ್ಲಿ ತಿಳಿಸಿರುವ ಅಳತೆ, ವಿನ್ಯಾಸ ಮತ್ತು ಗುಣಮಟ್ಟದ ಬಗ್ಗೆ ಮೆ: ಎಸ್.ಜಿ.ಎಸ್. ಇಂಡಿಯಾ ಲಿ., ಕ್ವಾಲಿಟಿ ಟೆಸ್ಟಿಂಗ್ ಅಂಡ್ ವೆರಿಫಿಕೇಷನ್ ಕಂಪನಿ, ಬಿ.ಟಿ.ಎಂ, ಲೇಔಟ್, ಬೆಂಗಳೂರು ರವರು ದೃಢೀಕರಿಸಿರುವ ಪ್ರಮಾಣ ಪತ್ರದೊಂದಿಗೆ ಪರಿಶೀಲಿಸಲಾಗಿದ್ದು, ಉತ್ತುಮ ಗುಣಮಟ್ಟದಲ್ಲಿ ಇರುವುದು ಕಂಡು ಬಂದಿರುತ್ತದೆ.

2013-14ನೇ ಸಾಲಿನಲ್ಲಿ ಅವಶ್ಯಕತೆ ಇರುವ ಪ್ರಮಾಣದಷ್ಟು ಉತ್ತಮ ಗುಣಮಟ್ಟದ ಶೂ ಮತ್ತು ಕಾಲುಚೀಲಗಳನ್ನು ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರು ನೀಡಿರುವ ಟೆಂಡರ್‌ನ ಕಡಿಮೆ ದರದಲ್ಲಿ ಖರೀದಿಸಲು, ಅಂದಾಜು ಖರೀದಿ ವೆಚ್ಚದ ಒಟ್ಟು ಮೊತ್ತ ಈ ಕೆಳಕಂಡಂತೆ ಇರುತ್ತದೆ.

| Sl. No. | Particulars | Quantity Nos. | Rates Rs.Ps. | Total Amount Rs.Ps. |
|---|---|---|---|---|
| 1 | Nursery Boys(3 yrs to 5 yrs) Black leather shoes with lays | 2450 | 326.00 | 7,98,700.00 |
| 2 | Nursery Girls(3 yrs to 5 yrs) Black leather shoes with belt | 2300 | 337.00 | 7,75,100.00 |
| 3 | Primary Boys (1st to 4th Std) Black leather shoes with lays | 575 | 339.00 | 1,94,925.00 |
| 4 | Primary Girls(1st to 4th Std) Black leather shoes with belt | 520 | 348.00 | 1,80,960.00 |

| | | | | |
|---|---|---|---|---|
| 5 | Primary Boys ($5^{st}$ to $7^{th}$ Std) Black leather shoes with lays | 525 | 340.00 | 1,78,500.00 |
| 6 | Primary Girls ($5^{st}$ to $7^{th}$ Std) Black leather shoes with belt | 410 | 340.00 | 1,39,400.00 |
| 7 | High School Boys($8^{th}$ to $10^{th}$ Std) Black leather shoes with lays | 2710 | 469.00 | 12,70,990.00 |
| 8 | High School Girls ($8^{th}$ to $10^{th}$ Std) Black leather shoes with belt | 4680 | 493.00 | 23,07,240.00 |
| 9 | High School Boys($8^{th}$ to $10^{th}$ Std) white canvas shoes with lays | 2710 | 224.00 | 6,07,040.00 |
| 10 | High School Girls ($8^{th}$ to $10^{th}$ Std) white canvas shoes with lays | 4680 | 224.00 | 10,48,320.00 |
| 11 | Nursery boys & girls black socks | 4750 | 27.00 | 1,28,250.00 |
| 12 | Primary boys & girls black socks | 2030 | 29.00 | 58,870.00 |
| 13 | High School boys & girls black socks | 7390 | 37.00 | 2,73,430.00 |
| 14 | High School boys & girls white socks | 7390 | 29.00 | 2,14,310.00 |
| | | | **Total** | **81,76,035.00** |

(Rupees Eighty One Lakhs Seventy Six Thousand & Thirty Five Only)

ವಿದ್ಯಾರ್ಥಿಗಳ ಅಂದಾಜು ಸಂಖ್ಯಾಬಲಕ್ಕನುಗುಣವಾಗಿ ಮೇಲ್ಕಂಡ ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಶಾಲೆಗಳಲ್ಲಿ ದಾಖಲಾತಿ ನಡೆಯುತ್ತಿರುವುದರಿಂದ, ಅಂದಾಜು ಸಂಖ್ಯಾಬಲ ಹೆಚ್ಚು ಕಡಿಮೆಯಾಗುವ ಸಂಭವವಿರುವುದರಿಂದ, ದಾಖಲಾತಿಯನ್ವಯ ಶಾಲಾ ಮುಖ್ಯಸ್ಥರುಗಳ ಬೇಡಿಕೆಗನುಗುಣವಾಗಿ ಶೂ ಮತ್ತು ಸಾಕ್ಸ್‌ಗಳನ್ನು ವಿತರಣೆ ಮಾಡಿ, ಸಂಬಂಧಿಸಿದ ಮೊತ್ತಕ್ಕೆ ಬಿಲ್ಲನ್ನು ಕ್ಲೈಮ್ ಮಾಡಲಾಗುವುದು. ಮೇಲ್ಕಂಡ ಖರೀದಿ ವೆಚ್ಚದ ಒಟ್ಟು ಅಂದಾಜು ಮೊತ್ತ ರೂ.81,76,035.00ಗಳನ್ನು ಕಂಡಿಕೆ-(4)ರಲ್ಲಿ ನಮೂಧಿಸಿರುವ ಆಯವ್ಯಯದ ಶೀರ್ಷಿಕೆಯಲ್ಲಿ ನಿಗದಿಪಡಿಸಿರುವ ಒಟ್ಟು ಮೊತ್ತ ರೂ.135.00 ಲಕ್ಷಗಳಲ್ಲಿ ಭರಿಸಿ ಅವಶ್ಯಕತೆ ಇರುವ ಪ್ರಮಾಣದಷ್ಟು ಶೂ ಮತ್ತು ಸಾಕ್ಸ್‌ಗಳನ್ನು ಕರ್ನಾಟಕ ಪಾರದರ್ಶಕ ನಿಯಮಾನುಸಾರ ಟೆಂಡರ್‌ನ ಕಡಿಮೆ ದರ ನೀಡಿರುವ ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರಿಂದ ಖರೀದಿಸಬಹುದಾಗಿರುತ್ತದೆ. ಸದರಿ ಖರೀದಿ ವೆಚ್ಚದ ಒಟ್ಟು ಮೊತ್ತ ರೂ.81,76,035.00ಗಳನ್ನು ಮಂಜೂರು ಮಾಡಲು ಹಾಗೂ ಈಗಾಗಲೇ 01.06.2013ರಿಂದ ಶಾಲೆಗಳು ಪ್ರಾರಂಭವಾಗಿರುವುದರಿಂದ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮೆ: ಎಕ್ಸೆಲ್ ಸ್ಪೋರ್ಟ್ಸ್ ರವರಿಗೆ ಶೂ ಮತ್ತು ಸಾಕ್ಸ್‌ಗಳನ್ನು ಅತೀ ಜರೂರಾಗಿ ಸರಬರಾಜು ಮಾಡುವಂತೆ ಸರಬರಾಜು ಆದೇಶ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಶಿಕ್ಷಣ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರವರ ಪತ್ರದ ಸಂಖ್ಯೆ: ವಿದ್ಯಾ(4ಎ)ಪಿಆರ್/04/13-14, ದಿನಾಂಕ: 03.08.2013ರ ಟಿಪ್ಪಣಿ ಬಗ್ಗೆ.

<u>**ದಿನಾಂಕ: 23.10.2013ರ ನಿರ್ಣಯ.**</u>

ವಿಷಯದ ಬಗ್ಗೆ ಧೀರ್ಘವಾಗಿ ಚರ್ಚಿಸಲಾಯಿತು, ಶೂ ಮತ್ತು ಕಾಲುಚೀಲಗಳ ವಿತರಣೆಯಲ್ಲಿ ಈಗಾಗಲೇ ಕಾಲ ವಿಳಂಭವಾಗಿರುವುದನ್ನು ಪರಿಗಣಿಸಿ, ಶಾಲಾ ಮಕ್ಕಳ ಹಿತದೃಷ್ಟಿಯಿಂದ, ಸರಬರಾಜು ಆದೇಶವನ್ನು ನೀಡುವಾಗ, ಉತ್ತಮ ಗುಣಮಟ್ಟದ ಶೂ ಮತ್ತು ಕಾಲುಚೀಲಗಳನ್ನು ವಿತರಿಸುವ ಷರತ್ತಿಗೊಳಪಡಿಸಿ, ವಿಶೇಷ ಆಯುಕ್ತರವರ ದಿನಾಂಕ:03.08.2013ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.

02. <u>ವಿಷಯ ಸಂಖ್ಯೆ: ಶಿ.ಸ್ಥಾ.ಸ/4/13-14</u>

ವಿಷಯ: ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಅವಶ್ಯಕತೆ ಇರುವ ಶಿಕ್ಷಕರು/ಉಪನ್ಯಾಸಕರುಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವ ಕುರಿತು.

~*~*~*~

ವಿಶೇಷ ಆಯುಕ್ತರು(ಯೋಜನೆ)ರವರ ಪತ್ರದ ಟಿಪ್ಪಣಿ ಸಂಖ್ಯೆ: ವಿದ್ಯಾ(4ಎ)ಪಿಆರ್/179/13-14, ದಿನಾಂಕ:27.09.2013ರಂತೆ, ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟ ಹಾಗೂ 2013-14ನೇ ಸಾಲಿಗೆ ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಅವಶ್ಯಕತೆ ಇರುವ ಶಿಕ್ಷಕರು/ಉಪನ್ಯಾಸಕರುಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವ ಸಂಬಂಧ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿ-ಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದ್ದ ಟೆಂಡರ್‌ನ ಸ್ವೀಕೃತಿಗೆ ಕಡೆಯ ದಿನಾಂಕ: 12.08.2013ರಂದು ತಾಂತ್ರಿಕ ಬಿಡ್‌ನ್ನು ತೆರೆಯಲಾಗಿರುತ್ತದೆ. ಈ ಟೆಂಡರ್‌ನಲ್ಲಿ 1) ಮೆ: ಕ್ರಿಸ್ಟಲ್ ಇನ್‌ಫೋ ಸಿಸ್ಟಮ್ ಅಂಡ್ ಸರ್ವಿಸಸ್ ಹಾಗೂ 2) ಮೆ: ಮನೀಶ್ ಮ್ಯಾನ್ ಫವರ್ ಏಜನ್ಸಿ ರವರುಗಳು ಭಾಗವಹಿಸಿದ್ದು, ಅದರಲ್ಲಿ ಕ್ರ.ಸಂ. 2)ರಲ್ಲಿರುವ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಅನರ್ಹಗೊಂಡಿರುವುದರಿಂದ, ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಏಕೈಕ ಟೆಂಡರ್‌ದಾರರಾಗಿ ಅರ್ಹಗೊಂಡಿರುವ ಕ್ರ.ಸಂ:1)ರಲ್ಲಿನ ಮೆ: ಕ್ರಿಸ್ಟಲ್ ಇನ್‌ಫೋಸಿಸ್ಟಮ್ ಅಂಡ್ ಸರ್ವಿಸಸ್ ರವರು ದಾಖಲಾತಿಗಳನ್ನು ಡೌನ್‌ಲೋಡ್ ಮಾಡಲಾಗಿರುತ್ತದೆ.

ಮೆ: ಕ್ರಿಸ್ಟಲ್ ಇನ್‌ಫೋಸಿಸ್ಟಮ್ ಅಂಡ್ ಸರ್ವಿಸಸ್ ರವರು ಟೆಕ್ನಿಕಲ್ ಬಿಡ್‌ನಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನು ದಿನಾಂಕ: 05.09.2013ರಂದು ತಾಂತ್ರಿಕ ಸಮಿತಿಯನ್ನು ರಚಿಸಿ, ಕಾನೂನು ಕೋಶದ ಮುಖ್ಯಸ್ಥರು ಸಹಾಯಕ ಲೆಕ್ಕಾಧಿಕಾರಿಗಳು ಹಾಗೂ ವಿಷಯ ಪರಿವೀಕ್ಷಕರುಗಳ ಸಮ್ಮುಖದಲ್ಲಿ ಪರಿಶೀಲಿಸಿದಾಗ ಮೆ: ಕ್ರಿಸ್ಟಲ್ ಇನ್‌ಫೋ ಸಿಸ್ಟಿಮ್ ಅಂಡ್ ಸರ್ವಿಸಸ್ ರವರು ಟೆಂಡರ್ ನಿಯಮಾನುಸಾರ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿರುವುದು ಕಂಡು ಬಂದಿರುತ್ತದೆ. ತಾಂತ್ರಿಕ ಸಮಿತಿಯ ತೀರ್ಮಾನದಂತೆ ದಿನಾಂಕ: 07.09.2013ರಂದು ಮೆ: ಕ್ರಿಸ್ಟಲ್ ಇನ್‌ಫೋ ಸಿಸ್ಟಿಮ್ ಅಂಡ್ ಸರ್ವಿಸಸ್ ರವರ ಫೈನ್ಯಾನ್ಸಿಯಲ್ ಬಿಡ್‌ನ್ನು ತೆರೆದು ಕಡತದಲ್ಲಿ ಲಗತ್ತಿಸಿದೆ.

ಈಗಾಗಲೇ 01.06.2013ರಿಂದ ಶಾಲಾ/ಕಾಲೇಜುಗಳು ಪ್ರಾರಂಭವಾಗಿದ್ದು, ವಿದ್ಯಾರ್ಥಿಗಳ ಪಾಠ-ಪ್ರವಚನಗಳ ಹಿತಾದೃಷ್ಟಿಯಿಂದ ಸದರಿ ಟೆಂಡರ್ ಪ್ರಕ್ರಿಯೆ ಮುಗಿಯುವವರೆಗೆ ಕಳೆದ ಸಾಲಿನಲ್ಲಿ ಪಡೆದಿದ್ದ ಟೆಂಡರ್‌ದಾರರಿಂದ ಹೊರಗುತ್ತಿಗೆ ಸೇವೆಯನ್ನು ಮುಂದುವರೆಸಲಾಗುತ್ತಿದೆ.

ಕಳೆದ ಸಾಲಿನಲ್ಲಿ 450 ಶಿಕ್ಷಕರು/ಉಪನ್ಯಾಸಕರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆದಿದ್ದು, ಪ್ರಸಕ್ತ ಸಾಲಿನಲ್ಲಿ 490 ಶಿಕ್ಷಕರು/ಉಪನ್ಯಾಸಕರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಅನುಮತಿಗಾಗಿ ಕಡತ ರವಾನಿಸಲಾಗಿತ್ತು. ಆದರೆ, ಕಳೆದ ಸಾಲಿನಷ್ಟೆ ಸಂಖ್ಯೆಯ ಶಿಕ್ಷಕರು/ಉಪನ್ಯಾಸಕರ ಸೇವೆಯನ್ನು ಪಡೆಯಲು ಕಂಡಿಕೆ (10)ರಲ್ಲಿ ಸೂಚಿಸಿರುವಂತೆ 450 ಶಿಕ್ಷಕರು/ಉಪನ್ಯಾಸಕರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಟೆಂಡರ್ ಆಹ್ವಾನಿಸಲಾಗಿತ್ತು. ಆದರೆ, ಪ್ರಸ್ತುತ ಸಾಲಿನಲ್ಲಿ 3 ಪದವಿ ಪೂರ್ವ ಕಾಲೇಜುಗಳನ್ನು ಹೊಸದಾಗಿ ಪ್ರಾರಂಭಿಸಿರುವುದರಿಂದ ಹಾಗೂ ಮಾಹೆಯಾನ ಕೆಲವು ಶಿಕ್ಷಕರು/ಉಪನ್ಯಾಸಕರುಗಳು ನಿವೃತ್ತಿ ಹೊಂದಲಿರುವುದರಿಂದ, ಅಂದಾಜು 490 ಶಿಕ್ಷಕರು/ಉಪನ್ಯಾಸಕರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಬಹುದಾಗಿರುತ್ತದೆ.

ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಅವಶ್ಯಕತೆ ಇರುವ ಶಿಕ್ಷಕರು/ಉಪನ್ಯಾಸಕರುಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ತಗಲುವ ವೆಚ್ಚವನ್ನು ಭರಿಸಲು 2013-14ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 25 ಶಿಕ್ಷಣ, ಸಾಮಾನ್ಯ ವೆಚ್ಚಗಳು, ಹೊರಗುತ್ತಿಗೆ ಶಿಕ್ಷಕರಿಗೆ ಗೌರವ ಸಂಭಾವನೆ (ಪಿ2647)ರಲ್ಲಿ ಮೊತ್ತ ರೂ.400.00 ಲಕ್ಷಗಳನ್ನು ಮೀಸಲಿರಿಸಲಾಗಿದೆ.

ಮುಂದುವರೆದು ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಅವಶ್ಯಕತೆ ಇರುವ ಶಿಕ್ಷಕರು/ಉಪನ್ಯಾಸಕರುಗಳ ಸೇವೆಯನ್ನು ಒದಗಿಸುವಂತೆ ಮೆ: ಕ್ರಿಸ್ಟಲ್ ಇನ್‌ಫೋ ಸಿಸ್ಟಿಮ್ ಅಂಡ್ ಸರ್ವಿಸಸ್ ರವರಿಗೆ ಸರಬರಾಜು ಆದೇಶ ನೀಡಲು ಹಾಗೂ ನಿವೃತ್ತರಾಗುವ ಸಂಖ್ಯೆಯನ್ನು ಆಧರಿಸಿ ಅಂದಾಜು 490 ಶಿಕ್ಷಕರು/ಉಪನ್ಯಾಸಕರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು, ವಿಶೇಷ ಆಯುಕ್ತರು(ಯೋಜನೆ)ರವರ ಪತ್ರದ ಟಿಪ್ಪಣಿ ಸಂಖ್ಯೆ: ವಿದ್ಯಾ(4ಎ)ಪಿಆರ್/179/13-14, ದಿನಾಂಕ:27.09.2013ರಲ್ಲಿರುವಂತೆ, ಅನುಮೋದನೆ ಕೋರಿ ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

<u>ನಿರ್ಣಯ:</u>

ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:27.09.13ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.

03. **ವಿಷಯ ಸಂಖ್ಯೆ: ಶಿ.ಸ್ಥಾ.ಸ/5/13-14**

ವಿಷಯ: ಪ್ರಜಾಯತ್ನ ಅಭಿವೃದ್ಧಿ ಮತ್ತು ತರಬೇತಿ ಸಂಸ್ಥೆಯವರು ಪಾಲಿಕೆಯ ಶಿಶುವಿಹಾರ ಮತ್ತು ಪ್ರಾಥಮಿಕ ಶಾಲೆಗಳ ಅಭಿವೃದ್ಧಿಗಾಗಿ ಯೋಜನೆಯನ್ನು ಸಿದ್ಧಪಡಿಸಿ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಶಾಲೆಗಳ ಅಭಿವೃದ್ಧಿಗೆ ಶ್ರಮಿಸಲು ಅನುಮತಿ ನೀಡುವ ಕುರಿತು.

~*~*~*~

ವಿಶೇಷ ಆಯುಕ್ತರು ರವರ ಪತ್ರದ ಟಿಪ್ಪಣಿ ಸಂಖ್ಯೆ: ವಿದ್ಯಾ(2)ಪಿಆರ್/94/12-13, ದಿನಾಂಕ:20.09.2013ರಂತೆ, ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಪ್ರಜಾಯತ್ನ ಅಭಿವೃದ್ಧಿ ಮತ್ತು ತರಬೇತಿ ಸಂಸ್ಥೆಯವರು ಮಾನ್ಯ ಆಯುಕ್ತ ರವರಿಗೆ ವಿಳಾಸ ಮಾಡಿರುವ ಪತ್ರದಲ್ಲಿ ಸಾಮಾಜಿ ಮತ್ತು ಆರ್ಥಿಕ ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಜನರು ಹಕ್ಕು ಪರಿಣಾಮಕಾರಿಯಾಗಿ ಭಾಗವಹಿಸುವುದು ಮುಖ್ಯ ಇದನ್ನು ಸಾಕಾರಗೊಳಿಸುವ ನೆಲೆಯಲ್ಲಿ ಸಂವಿಧಾನದ 73 ಮತ್ತು 74ನೇ ತಿದ್ದುಪಡಿ ಕಾಯ್ದೆ ಮೂಲಕ ವಿಕೇಂದ್ರೀಕರಣ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಆಡಳಿತ ವಿಕೇಂದ್ರಿಕರಣದ ಬಗ್ಗೆ ಕರ್ನಾಟಕ ಸರ್ಕಾರ ಹೆಚ್ಚಿನ ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸುತ್ತಾ ಬಂದಿದೆ. ಇದಕ್ಕೆ ಸಂಬಂಧಿಸಿದಂತೆ 73ನೇ ತಿದ್ದುಪಡಿಯನ್ನು ಜಾರಿಗೆ ತರಲಾಗಿದೆ. ಅಲ್ಲದೇ ಅಕ್ಟೋಬರ್ 21, 2004ರಲ್ಲಿ ಪ್ರಕಟಿಸಿದ ರಾಜ್ಯಪತ್ರದಂತೆ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳ ಅಧಿಕಾರ ವರ್ಗಾವಣೆ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಮಾಡಿರುವ ಒಂದು ಮಹತ್ವದ ಮೈಲಿಗಲ್ಲಾಗಿದೆ. 74ನೇ ಸಂವಿಧಾನಾತ್ಮಕ ತಿದ್ದುಪಡಿಯು, ನಗರ ಪಾಲಿಕೆಯನ್ನು ಒಂದು ಸ್ವಯಂ ಆಡಳಿತ ಸರ್ಕಾರದ ಪರಿಣಾಮಕಾರಿ ಸಂಸ್ಥೆಯಂತೆ ಕಾರ್ಯನಿರ್ವಹಿಸಬೇಕೆಂದು ಇಚ್ಛಿಸುತ್ತದೆ ನಗರ ಪಾಲಿಕೆಯು ಸಾಂಪ್ರದಾಯಿಕ ಸಂವಿಧಾನದ ಕಾರ್ಯಾಚರಣೆಯೊಂದಿಗೆ ನಾಗರೀಕರಿಗೆ ಸೌಕರ್ಯಗಳನ್ನು ಒದಗಿಸುವುದಲ್ಲದೇ ಅದಕ್ಕಿಂತ ಹೆಚ್ಚಿನ ಕಾರ್ಯ ವ್ಯಾಪ್ತಿಯ ಕುರಿತು ಆಲೋಚಿಸುತ್ತದೆ. ಒಟ್ಟಾರೆ 74ನೇ ತಿದ್ದುಪಡಿಯನ್ವಯ ನಗರ ಪಾಲಿಕೆ ಸ್ಥಳೀಯ ಅಭಿವೃದ್ಧಿ ಯೋಜನೆ ರೂಪಿಸುವುದರಲ್ಲಿ ಹಾಗೂ ಅವುಗಳ ಅನುಷ್ಠಾನದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಒಂದು ದೇಶದ/ರಾಜ್ಯದ ಅಭಿವೃದ್ಧಿ ಮಾನದಂಡಗಳಲ್ಲಿ ಶಿಕ್ಷಣ ಬಹು ಮುಖ್ಯ ಮತ್ತು ಹೆಚ್ಚಿನ ಗಮನ ಕೊಡಬೇಕಾದ ವಿಚಾರವಾಗಿದೆ ಎಂಬುದು ಸರ್ವತಾ ಒಪ್ಪತಕ್ಕದಾಗಿದೆ. ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976ಕ್ಕೆ ದಿನಾಂಕ: 01.02.2011ರಂದು ತಿದ್ದುಪಡಿ ತಂದು **"ಸಮುದಾಯ ಸಹಭಾಗಿತ್ವ ಕಾನೂನು"** ಜಾರಿಗೆ ತರುವ ಮೂಲಕ ಏರಿಯಾ ಸಭಾ ಮತ್ತು ವಾರ್ಡ್ ಸಮಿತಿಗಳ ರಚನೆಗೆ ಅವಕಾಶ ಕಲ್ಪಿಸಿ, ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಸಮುದಾಯ ಭಾಗವಹಿಸುವಿಕೆಯನ್ನು ಮತ್ತಷ್ಟು ಬಲಗೊಳಿಸುವ ನಿಟ್ಟಿನಲ್ಲಿ ಕಾನೂನಾತ್ಮಕ ಬೆಂಬಲವನ್ನು ನೀಡಿದೆ. ಸ್ಥಳೀಯ ಅಭಿವೃದ್ಧಿ ಯೋಜನೆ ಎಂದಾಗ ಅದು ನಾಗರೀಕರ ಮೂಲಭೂತ ಸೌಕರ್ಯಗಳಾಗಿದ್ದು, ಅದರಲ್ಲಿ ಶಿಕ್ಷಣವು ಸಹ ಒಂದಾಗಿದೆ. "ಪ್ರಜಾಯತ್ನ" ಅಭಿವೃದ್ಧಿ ಮತ್ತು ತರಬೇತಿ ಸಂಸ್ಥೆ, ಪ್ರಸ್ತುತ ಕರ್ನಾಟಕ ರಾಜ್ಯದ 22 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಗುಣಾತ್ಮಕ ಶಿಕ್ಷಣದ ನಿಟ್ಟಿನಲ್ಲಿ ಸಾಮರ್ಥ್ಯ ಆಧಾರಿತ ಕಲಿಕಾ ದೃಷ್ಟಿಕೋನವನ್ನು ಅಭಿವೃದ್ಧಿಪಡಿಸುತ್ತಾ, ಭಾಗೀದಾರರ ಒಡೆತನವನ್ನು ಸಾಂಸ್ಥೀಕರಿಸುವ ಪ್ರಕ್ರಿಯೆಯನ್ನು ಅನುಕೂಲಿಸಲಾಗುತ್ತಿದೆ. ಆ ಮೂಲಕ ಸುಧಾರಣೆಗೆ ಬೆಂಬಲಿಸಲು ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯತಿಗಳೊಂದಿಗೆ) ಸಂಸ್ಥೆಯನ್ನೊಳಗೊಂಡಂತೆ ಸ್ಥಳೀಯ ಆಡಳಿತ ಘಟಕಗಳು, ಸಮುದಾಯ, ಎಸ್‌ಡಿಎಂಸಿ ಮತ್ತು ಶಿಕ್ಷಣ ಇಲಾಖೆಗಳೊಂದಿಗೆ ಕಾರ್ಯನಿರ್ವಹಿಸುತ್ತಾ ಬಂದಿದೆ. ನಗರ ವ್ಯಾಪ್ತಿಯಲ್ಲಿಯೂ ವಿಕೇಂದ್ರೀಕೃತ ಶೈಕ್ಷಣಿಕ ಸಂರಚನೆಗಳೊಂದಿಗೆ ಕಾರ್ಯನಿರ್ವಹಿಸುವ ಅಗತ್ಯತೆಯನ್ನು ಪ್ರಜಾಯತ್ನ ಮನಗಂಡಿದ್ದು, ಇದಕ್ಕೆ ಪೂರಕವಾಗಿ ಈಗಾಗಲೇ ಬೆಂಗಳೂರು ಮಹಾನಗರ ಪಾಲಿಕೆಯ ಆಯ್ದ ವಾರ್ಡ್‌ಗಳ ವ್ಯಾಪ್ತಿಯಲ್ಲಿ ಎಸ್‌ಡಿಎಂಸಿ ಸಮಿತಿಗಳೊಂದಿಗೆ ಯೋಜನೆ ರೂಪಿಸಿ, ಆ ನಂತರ ವಾರ್ಡ್‌ನ ಚುನಾಯಿತ ಪ್ರತಿನಿಧಿಗಳೊಂದಿಗೆ ಹಂಚಿಕೊಂಡು ಅನುಷ್ಠಾನಗೊಳಿಸುವ ಪ್ರಕ್ರಿಯೆಯನ್ನು ನಿರ್ವಹಿಸಿದೆ. ಪ್ರಜಾಯತ್ನ ತನ್ನ ಅನುಭವವನ್ನು ಆಧರಿಸಿ, ಪಾಲಿಕೆ ವ್ಯಾಪ್ತಿಯಲ್ಲಿ ಶಾಲಾ ಹಂತ, ವಾರ್ಡ್ ಮತ್ತು ಶಿಕ್ಷಣ ಸ್ಥಾಯಿ ಸಮಿತಿಗಳೊಂದಿಗೆ ಕಾರ್ಯನಿರ್ವಹಿಸುವ ಆಲೋಚನೆಯನ್ನು ಹೊಂದಿರುವುದರಿಂದ ಅನುಮತಿ ನೀಡಬೇಕೆಂದು ಕೋರಿದ್ದು, ಸದರಿ ಕಾರ್ಯಕ್ರಮದಿಂದ ಕೆಳಕಂಡಂತೆ ನಿರೀಕ್ಷಿತ ಫಲಿತಾಂಶ ಬರುತ್ತದೆಂದು ತಿಳಿಸಿರುತ್ತಾರೆ.

- ಕಾರ್ಯನಿರ್ವಹಿಸುವ ಎಲ್ಲಾ ಸರ್ಕಾರಿ ಶಾಲೆ/ಶಿಶುವಿಹಾರಗಳಲ್ಲಿ ಪ್ರಜಾಸತಾತ್ಮಕ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ರಚನೆಯನ್ನು ಖಾತ್ರಿಪಡಿಸುವುದು.
- ವಾರ್ಡ್ ಸಮಿತಿಗಳು ಶಿಕ್ಷಣ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತದೆ.
- ಪಾಲಿಕೆ ಶಾಲೆಗಳ ಶಿಕ್ಷಕರಿಗೆ ನಿರಂತರ ತರಬೇತಿಗಳಾಗುತ್ತದೆ. ಆ ಮೂಲಕ ಶಿಕ್ಷಣದ ಗುಣಮಟ್ಟವನ್ನು ಕಾಯ್ದುಕೊಳ್ಳಲಾಗುತ್ತದೆ.
- ಕಾರ್ಯ ನಿರ್ವಹಿಸಲಿರುವ ವಾರ್ಡ್‌ಗಳ ಪಾಲಿಕೆಯ ಶಾಲೆಗಳಲ್ಲಿ ಪೋಷಕ ಪ್ರತಿನಿಧಿಗಳ ಭಾಗವಹಿಸುವಿಕೆ ಹೆಚ್ಚಾಗುವುದರ ಮೂಲಕ ಶಾಲೆಗಳಲ್ಲಿನ ದಾಖಲಾತಿ, ನಿರಂತರ ಹಾಜರಾತಿ, ಶೈಕ್ಷಣಿಕ ಪ್ರಗತಿಯ ಖಾತ್ರಿ ಶೈಕ್ಷಣಿಕ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾ ಇತ್ಯಾದಿ ಪ್ರಕ್ರಿಯೆಗಳಲ್ಲಿ ಬದಲಾವಣೆಗಳು.
- ಪ್ರತಿ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಮೂರು ಬಾರಿಯಾದರೂ ಪಾಲಿಕೆ ಶಾಲೆ/ಸರ್ಕಾರಿ ಶಾಲೆಗಳಲ್ಲಿ ಪೋಷಕರ ಸಭೆಗಳು ನಡೆಯುವಂತೆ ಮಾಡುವುದು.

- ಕಾರ್ಯನಿರ್ವಹಿಸಲಿರುವ ವಾರ್ಡ್‌ಗಳ ಸರ್ಕಾರಿ ಶಾಲೆಗಳ ಎಸ್‌ಡಿಎಂಸಿ ಮತ್ತು ಪಾಲಿಕೆ ಶಾಲೆಗಳ ಎಸ್‌ಎಂಸಿಗಳು ನಿರಂತರವಾಗಿ ಸಭೆ ಸೇರುವುದರ ಮೂಲಕ ಶಾಲಾ ಯೋಜನೆ – ಅನುಷ್ಠಾನ – ಅವಲೋಕನ ಪ್ರಕ್ರಿಯೆಯಲ್ಲಿ ತೊಡಗಿರುತ್ತದೆ.
- 2006 ಜೂನ್ 14ರ ಸುತ್ತೋಲೆಯಂತೆ ಎಸ್‌ಡಿಎಂಸಿ ವಾರ್ಡ್ ಸಮಿತಿಯ ಜೊತೆ ಕಾರ್ಯನಿರ್ವಹಿಸುವ ವಿಚಾರವಾಗಿ ಸ್ಪಷ್ಟತೆ ಸಿಗುತ್ತದೆ.
- ಬಿಬಿಎಂಪಿ ಸರ್ಕಾರಿ ಶಾಲೆಗಳಿಗೆ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸುತ್ತದೆ.
- ಬಿಬಿಎಂಪಿ ವಿದ್ಯಾ ಇಲಾಖೆ ಮತ್ತು ಶಿಕ್ಷಣ ಇಲಾಖೆಯ ನಡುವೆ ಯೋಜನೆ – ಅನುಷ್ಠಾನ – ಅವಲೋಕನದಲ್ಲಿ ಸಹಸಂಬಂಧ ಏರ್ಪಡುತ್ತದೆ.
- ವಾರ್ಡ್ ಸಮಿತಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ಎಸ್‌ಡಿಎಂಸಿ ಮತ್ತು ಎಸ್‌ಎಂಸಿಗಳ ಜಂಟಿ ಸಭೆಯನ್ನು ಆಯೋಜನೆ ಮಾಡುವ ಮೂಲಕ ಶಾಲಾ ಶೈಕ್ಷಣಿಕ ಯೋಜನೆಗಳಿಗೆ ಬೆಂಬಲ ಒದಗಿಸುತ್ತವೆ.
- ಪಾಲಿಕೆ ಶಾಲೆಗಳಲ್ಲಿ ಶಿಕ್ಷಕರ ಸಬಲೀಕರಣದ ಅಗತ್ಯತೆ ಕುರಿತು ಪರಿಕಲ್ಪನೆ ಹೊಂದುತ್ತಾರೆ.

ಮುಂದುವರೆದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಈಗಾಗಲೇ ಎಸ್‌ಡಿಎಂಸಿಗಳನ್ನು ಪ್ರಾರಂಭಿಸಲಾಗಿರುತ್ತದೆ. ಆದರೆ ಶಿಶುವಿಹಾರಗಳಲ್ಲಿ ಸಮಿತಿಗಳನ್ನು ರಚಿಸಿರುವುದಿಲ್ಲ. ಸದರಿ ಸಂಸ್ಥೆಯವರು **ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಶಿಶುವಿಹಾರ, ಪ್ರಾಥಮಿಕ ಶಾಲಾ ಹಂತ, ವಾರ್ಡ್ ಮತ್ತು ಶಿಕ್ಷಣ ಸ್ಥಾಯಿ ಸಮಿತಿಗಳೊಂದಿಗೆ** ಕಾರ್ಯನಿರ್ವಹಿಸುವ ಆಲೋಚನೆಯನ್ನು ಹೊಂದಿದ್ದು, ಪಾಲಿಕೆಯ 13 ಪ್ರಾಥಮಿಕ ಶಾಲೆಗಳು ಹಾಗೂ 32 ವಾರ್ಡ್‌ಗಳಲ್ಲಿ ಬರುವ ಶಿಶುವಿಹಾರ ಶಾಲೆಗಳ ಅಭಿವೃದ್ಧಿಗಾಗಿ ಯೋಜನೆಯನ್ನು ಸಿದ್ಧಪಡಿಸಿ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿ ಅಭಿವೃದ್ಧಿಗಾಗಿ ಶ್ರಮಿಸಲು ಕೋರಿರುವುದರಿಂದ ಹಾಗೂ ಸದರಿ ಯೋಜನೆಗೆ ಪಾಲಿಕೆಯಿಂದ ಯಾವುದೇ ಆರ್ಥಿಕ ವ್ಯಯವಾಗದಿರುವುದರಿಂದ, ಸದರಿ ಸಂಸ್ಥೆಗೆ ಅನುಮತಿ ನೀಡುವ ಸಂಬಂಧ ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ವಿಶೇಷ ಆಯುಕ್ತರು ರವರ ಪತ್ರದ ಸಂಖ್ಯೆ:ವಿದ್ಯಾ(2)ಪಿಆರ್/94/12-13, ದಿನಾಂಕ: 20.09.2013ರಲ್ಲಿರುವಂತೆ ಮಂಡಿಸಿರುವ ಟಿಪ್ಪಣಿ ಬಗ್ಗೆ.

**"ಹೆಚ್ಚಿನ ಚರ್ಚೆಗಾಗಿ ಮುಂದೂಡಿದೆ"**

ಎ.ಕೋದಂಡ ರೆಡ್ಡಿ,
ಅಧ್ಯಕ್ಷರು,
ಶಿಕ್ಷಣ ಸ್ಥಾಯಿ ಸಮಿತಿ,

ಪ್ರತಿಯನ್ನು:

1) ಮಹಾ ಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
2) ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
3) ಆಡಳಿತ ಪಕ್ಷ/ವಿರೋಧ ಪಕ್ಷ ಹಾಗೂ ಜೆ.ಡಿ.ಎಸ್. ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
4) ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತ ರವರ ಅವಗಾಹನೆಗೆ ತರಲು ಕೋರಿದೆ.
5) ವಿಶೇಷ ಆಯುಕ್ತರು (ಯೋಜನೆ)ರವರ ಅವಗಾಹನೆಗಾಗಿ ಕಳುಹಸಿದೆ.
6) ಅಪರ ಆಯುಕ್ತರು (ಶಿಕ್ಷಣ) ರವರ ಅವಗಾಹನೆಗಾಗಿ ಕಳುಹಿಸಿದೆ.
7) ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಅಂತರ್ಜಾಲದಲ್ಲಿ ಅಳವಡಿಸಲು ಸೂಕ್ತ ಕ್ರಮ ವಹಿಸುವಂತೆ ಸೂಚಿಸಿದೆ.
8) ಶಿಕ್ಷಣಾಧಿಕಾರಿ/ಕ್ರೀಡಾಧಿಕಾರಿ ಮತ್ತು ದೈಹಿಕ ಶಿಕ್ಷಣಾಧಿಕಾರಿ ರವರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
9) ಕಛೇರಿ ಕಡತಕ್ಕೆ.

6

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## <u>ದಿನಾಂಕ: 24.10.2013ರಂದು ಶಿಕ್ಷಣ ಸ್ಥಾಯಿ ಸಮಿತಿಯು ನಡೆಸಿದ ತಪಾಸಣೆಯ, ತಪಾಸಣಾ ವರದಿ</u>

| ಕ್ರ. ಸ | ಹಾಜರಿದ್ದ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರು | ಪದನಾಮ | ಕ್ರ. ಸ | ಹಾಜರಿದ್ದ ಅಧಿಕಾರಿಗಳ ಹೆಸರು | ಪದನಾಮ |
|---|---|---|---|---|---|
| 1 | ಎ.ಕೋದಂಡ ರೆಡ್ಡಿ | ಅಧ್ಯಕ್ಷರು | 1 | ಮಂಜುನಾಥ್ | ಸ.ಕಾ.ನಿ..ಅ(ಯೋ)(ಪೂ) |
| 2 | ತೇಜಸ್ವಿನಿ ಎನ್.ರಾಜು | ಸದಸ್ಯರು | 2 | ಬಿಸೆಟ್ಟಪ್ಪ | ಸ.ಅ(ಯೋ)(ಪೂ) |
| 3 | ಶಶಿಕಲಾ ಕೃಷ್ಣೇಗೌಡ | ಸದಸ್ಯರು | 3 | ಎ.ಕಾಂತಪ್ಪ | ವಿಷಯ ನಿರ್ವಾಹಕರು |
| 4 | ವೈ.ಎನ್.ಅಶ್ವಥ್ | ಸದಸ್ಯರು | 4 | ಜಿ.ಎಸ್.ನಾಗರಾಜು | ಕ್ರೀಡಾಧಿಕಾರಿಗಳು |
| 5 | ಪಿ.ಸುಗುಮಾರ್(ಸುಗುಣ್) | ಸದಸ್ಯರು | 5 | ಬಿ.ಆರ್.ತಾರಾಮತಿ | ಸ.ಶಿ.ಅ(ಪೂರ್ವ) |
| 6 | ನೂರ್ ಜಹಾನ್ | ಸದಸ್ಯರು | 6 | ವೆಂಕಟಕೃಷ್ಣಪ್ಪ | ದೈಹಿಕ ಶಿಕ್ಷಣಾಧಿಕಾರಿ |
| | | | 7 | ಡಿ.ಪಿ.ಪಂಚಲಿಂಗಮಹೇಂದ್ರ ಸ್ವಾಮಿ | ಕ್ರೀಡಾಂಗಣ ಮೇಲ್ವಿಚಾರಕಲರು |

ಶಿಕ್ಷಣ ಸ್ಥಾಯಿ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು, ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಅಧಿಕಾರಿ ವರ್ಗದವರು ದಿನಾಂಕ: 24.10.2013ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಒಡೆತನದ, ಈ ಕೆಳಕಂಡ ಶಾಲೆಗಳಿಗೆ ಭೇಟಿ ನೀಡಲಾಯಿತು.

1) ಬೃ.ಬೆಂ.ಮ.ಪಾ. ಪ್ರಾಥಮಿಕ ಪಾಠ ಶಾಲೆ, ಆಸ್ಟಿನ್ ಟೌನ್.
2) ಬೃ.ಬೆಂ.ಮ.ಪಾ. ಹಿರಿಯ ಪ್ರಾಥಮಿಕ ಪಾಠ ಶಾಲೆ, ನೀಲಸಂದ್ರ.
3) ಬೃ.ಬೆಂ.ಮ.ಪಾ. ಶಿಶುವಿಹಾರ, ನೀಲಸಂದ್ರ.

ಮೇಲೆ ತಿಳಿಸಲಾಗಿರುವ, ಎಲ್ಲಾ ಶಾಲೆಗಳಿಗೆ ಮೂಲಭೂತ ಸೌಕರ್ಯಗಳಾದ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆಯ ತೊಂದರೆಗಳು ಎದ್ದು ಕಾಣುತ್ತಿದ್ದವು. ಕಟ್ಟಡಗಳಿಗೆ ಸಂಬಂಧಿಸಿದಂತೆ, ಕೆಲವೊಂದು ಕಟ್ಟಡಗಳು ಉತ್ತಮ ಗುಣಮಟ್ಟದಿಂದ ಕೂಡಿದ್ದಾಗಿದ್ದು, ಕೆಲವು ಕಟ್ಟಡಗಳು ದುರಸ್ತಿ ಕಾಮಗಾರಿ ಕಾರ್ಯಗಳು ನಿರ್ವಹಿಸಬೇಕಾಗಿರುತ್ತದೆ.

1) <u>ಬೃ.ಬೆಂ.ಮ.ಪಾ. ಪ್ರಾಥಮಿಕ ಪಾಠ ಶಾಲೆ, ಆಸ್ಟಿನ್ ಟೌನ್:-</u> ಈ ಶಾಲೆಗೆ ಭದ್ರತಾ ಸಿಬ್ಬಂದಿ ಇರುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳಿಗೆ ಭದ್ರತಾ ವ್ಯವಸ್ಥೆಯನ್ನು ಜರೂರು ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು. ಸದರಿ ಶಾಲೆಯ ಒಂದು ಕಟ್ಟಡವು ಸುಸ್ಥಿತಿಯಲ್ಲಿದ್ದು, ಶುಚಿತ್ವ ಕಾಪಾಡುವುದರಲ್ಲಿ ಹಾಗೂ ನಿರ್ವಹಣೆಯಲ್ಲಿ ಪಾಲಿಕೆಯ ಅಧಿಕಾರಿಗಳು ವಿಫಲರಾಗಿರುತ್ತಾರೆ. ಶೌಚಾಲಯದ ಕೊರತೆ ಹಾಗೂ ಇದ್ದ ಶೌಚಾಲಯಗಳು ಹೇಳಲಾಗದಷ್ಟು ದುಸ್ತಿತಿಯಲ್ಲಿದ್ದು, ಕುಡಿಯುವ ನೀರು ಹಾಗೂ ಶೌಚಾಲಯವು ದುಸ್ಥಿತಿಯಲ್ಲಿರುವುದರಿಂದ, ಶೌಚಾಲಯಕ್ಕೆ ನೀರಿನ ವ್ಯವಸ್ಥೆ ಹಾಳಾಗಿರುತ್ತದೆ.

ಸದರಿ ಶಾಲೆಗೆ ಹೊಂದಿಕೊಂಡಂತೆ ಇರುವ ರಕ್ಷಣಾ ಪಡೆಯವರು ಶಾಲೆಯ ಆವರಣದಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಪಾಲಿಕೆಯ ವತಿಯಿಂದ ಕೈಗೊಂಡ ಸಮಯಗಳಲ್ಲಿ, ಸದರಿ ಆಸ್ತಿಯು ರಕ್ಷಣಾ ಪಡೆಗೆ ಸಂಬಂಧಿಸಿದೆ ಎಂದು ಕೆಲಸ ಕಾರ್ಯಗಳನ್ನು ಮಾಡಲು ಅಡ್ಡಿಪಡಿಸುತ್ತಿರುವುದಾಗಿ ಸ್ಥಳೀಯ ಸಾರ್ವಜನಿಕರ ಮೌಖಿಕವಾಗಿ ತಿಳಿಸಿರುತ್ತಾರೆ. ಅಭಿಯಂತರರುಗಳಿಗೆ ಸ್ಥಳದಲ್ಲಿಯೇ ಜರೂರು ಕ್ರಮವಹಿಸುವಂತೆ ಸೂಚಿಸಲಾಯಿತು.

2) <u>ಬೃ.ಬೆಂ.ಮ.ಪಾ. ಹಿರಿಯ ಪ್ರಾಥಮಿಕ ಪಾಠ ಶಾಲೆ, ನೀಲಸಂದ್ರ:-</u> ಈ ಶಾಲೆಯ ಕಟ್ಟಡವು ಉತ್ತಮ ಗುಣಮಟ್ಟದಿಂದ ಇದ್ದು, ನಿರ್ವಹಣೆಯ ಕಾರ್ಯದಲ್ಲಿ ಅಧಿಕಾರಿಗಳು ವಿಫಲರಾಗಿರುವುದು ಎದ್ದು ಕಾಣುತ್ತಿತ್ತು. ನೆಲ ಹಾಸಿಗೆ, ನೀರಿನ ಪೈಪುಗಳು ಹಾಗು ಹೊರ ಛಾವಣಿಯ ಶೀಟ್‌ಗಳನ್ನು ಬದಲಾಯಿಸಿ ಸುಸ್ಥಿತಿಯಲ್ಲಿಡುವಂತೆ, ಶಾಲಾ ಮುಂಭಾಗದಲ್ಲಿ ಕಸದ ರಾಶಿ ಕಂಡು ಬಂದಿದ್ದು, ತುಂಬ ಕೆಟ್ಟ ವಾಸನೆಯಿಂದ ಕೂಡಿದ್ದು, ಆರೋಗ್ಯ ಇಲಾಖೆಯ ಗಮನ ಹರಿಸದಿರುವುದು ಕಂಡು ಬಂದಿದ್ದು, ಕೂಡಲೇ ಸೂಕ್ತ ಕ್ರಮ ವಹಿಸಿ ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ಸ್ವಚ್ಛತೆ ಕಾಪಾಡುವಂತೆ, ಅಭಿಯಂತರರುಗಳಿಗೆ ಸ್ಥಳದಲ್ಲಿಯೇ ತಾಕೀತು ಮಾಡಲಾಯಿತು.

3) <u>ಬೃ.ಬೆಂ.ಮ.ಪಾ. ಶಿಶುವಿಹಾರ, ನೀಲಸಂದ್ರ</u>:- ಈ ಶಾಲೆಯ ಕಟ್ಟಡವು ಶಿಥಿಲಾವಸ್ಥೆಯ ಅಂಚಿನಲ್ಲಿದ್ದು ಅಲ್ಲಿ ಇದ್ದ ಮಕ್ಕಳ ಸಂಖ್ಯೆ ಬಹಳ ಕಡಿಮೆ ಇದ್ದು, ಅಲ್ಲಿಯ ಮಕ್ಕಳನ್ನು ಹಿರಿಯ ಪ್ರಾಥಮಿಕ ಪಾಠ ಶಾಲೆ, ನೀಲಸಂದ್ರ, ಇಲ್ಲಿಗೆ ಸ್ಥಳಾಂತರಿಸಲಾಗಿದೆ ಎಂಬ ವಿಷಯವನ್ನು ಅಲ್ಲಿನ ಮುಖ್ಯೋಪಾಧ್ಯಾಯರು ತಿಳಿಸಿದ್ದು, ದುರಸ್ತಿ ಕಾಮಗಾರಿಗಳನ್ನು ಜರೂರು ನಿರ್ವಹಿಸುವಂತೆ, ಅಭಿಯಂತರರುಗಳಿಗೆ ಸ್ಥಳದಲ್ಲಿಯೇ ಸೂಚಿಸಲಾಯಿತು.

ಎ.ಕೋದಂಡ ರೆಡ್ಡಿ,<br>
ಅಧ್ಯಕ್ಷರು,<br>
ಶಿಕ್ಷಣ ಸ್ಥಾಯಿ ಸಮಿತಿ,<br>
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:

1) ಮಹಾ ಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
2) ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
3) ಆಡಳಿತ ಪಕ್ಷ/ವಿರೋಧ ಪಕ್ಷ ಹಾಗೂ ಜೆ.ಡಿ.ಎಸ್. ಪಕ್ಷದ ನಾಯಕರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
4) ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
5) ಅಪರ ಆಯುಕ್ತರು(ಯೋಜನೆ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
6) ಅಪರ ಆಯುಕ್ತರು (ಶಿಕ್ಷಣ)ರವರಿಗೆ ಕಳುಹಿಸುತ್ತಾ, ಸೂಕ್ತ ಕ್ರಮ ಜರುಗಿಸಲು ಕೋರಿದೆ.
7) ಕಾರ್ಯಪಾಲಕ ಅಭಿಯಂತರರು-(ಯೋಜನೆ)/(ಪೂರ್ವ)ರವರಿಗೆ ಕಳುಹಿಸುತ್ತಾ, ಸಂಬಂಧಿಸಿದ ಕಾರ್ಯಗಳನ್ನು ಜರೂರಾಗಿ ನಿರ್ವಹಿಸಲು ಸೂಚಿಸಿದೆ.
8) ಶಿಕ್ಷಣಾಧಿಕಾರಿ/ಕ್ರೀಡಾಧಿಕಾರಿ ಮತ್ತು ದೈಹಿಕ ಶಿಕ್ಷಣಾಧಿಕಾರಿ ರವರುಗಳಿಗೆ ಕಳುಹಿಸುತ್ತಾ, ಸೂಕ್ತ ಕ್ರಮಕೈಗೊಳ್ಳಲು ಕಟ್ಟುನಿಟ್ಟಾಗಿ ಸೂಚಿಸಿದೆ.
9) ಮಾಹಿತಿ ತಂತ್ರಜ್ಞಾನ ಸಲಹೆಗಾರರಿಗೆ ಕಳುಹಿಸುತ್ತಾ, ಅಂತರ್ಜಾಲದಲ್ಲಿ ಅಳವಡಿಸಲು ಸೂಕ್ತ ಕ್ರಮವಹಿಸುವಂತೆ ಸೂಚಿಸಿದೆ.
10) ಕಛೇರಿ ಕಡತಕ್ಕೆ.